# ಸನ್ಮಾರ್ಗ

ಸಯ್ಯದ್ ಯೂಸುಫ್

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

# ಪ್ರಕಾಶಕರ ಮಾತು

ಇಸ್ಲಾಮ್ ನೈಜ ಸನ್ಮಾರ್ಗವಾಗಿದ್ದು ಅದು ಲೋಕಾರಂಭದಿಂದ ಮಾನವನ ಧರ್ಮವಾಗಿದೆ. ಆದರೆ ಜನರ ಹಸ್ತಕ್ಷೇಪಗಳಿಂದಾಗಿ ಅದು ವಿಕೃತಗೊಂಡು ವಿವಿಧ ಧರ್ಮಗಳಾಗಿ ಪರಿವರ್ತನೆಗೊಂಡಿತು. ಎಲ್ಲ ಧರ್ಮಗಳ ಮೂಲ ಇದೇ ಸನ್ಮಾರ್ಗ ಅಥವಾ ಇಸ್ಲಾಮ್ ಆಗಿದ್ದು, ಅದರೆಡೆಗೆ ಜನರನ್ನು ಆಹ್ವಾನಿಸಲು ಕಾಲಕಾಲಕ್ಕೆ ಪ್ರವಾದಿಗಳ ಆಗಮನವು ಅಗತ್ಯವಾಗಿತ್ತು.

ಇಸ್ಲಾಮಿನ ಪರಿಚಯದ ಕುರಿತು ಸಾಹಿತ್ಯಗಳಿಗೇನೂ ಕಡಿಮೆಯಿಲ್ಲ. ಕಿರು ಹೊತ್ತಿಗೆಯಿಂದ ಹಿಡಿದು ಬೃಹತ್ ಗ್ರಂಥಗಳ ವರೆಗೂ ಜಗತ್ತಿನಾದ್ಯಂತ ವಿವಿಧ ಭಾಷೆಗಳಲ್ಲಿ ಪ್ರಕಾಶನಗೊಂಡಿವೆ. ಈಗಲೂ ಪ್ರಕಟಗೊಳ್ಳುತ್ತಾ ಇವೆ. ಒಂದೆಡೆ ಇಸ್ಲಾಮಿನ ಸಮಗ್ರವೂ ಸಂಪೂರ್ಣವೂ ಆದ ಪರಿಚಯ ನೀಡುವ ಗ್ರಂಥಗಳಿದ್ದರೆ, ಇನ್ನೊಂದೆಡೆ ಇಸ್ಲಾಮಿನ ವಿವಿಧ ರಂಗಗಳಿಗೆ ಸಂಬಂಧಿಸಿದ ಕೃತಿಗಳನ್ನು ರಚಿಸಲಾಗಿದೆ.

ಸನ್ಮಾರ್ಗ ಎಂಬ ಈ ಕೃತಿಯಲ್ಲಿ ಮೌಲಾನಾ ಸೈಯದ್ ಯೂಸುಫ್‌ರವರು ಇಸ್ಲಾಮಿನ ಮೂಲಭೂತ ವಿಶ್ವಾಸ ಮತ್ತು ಆರಾಧನಾ ಕರ್ಮಗಳಿಂದ ಹಿಡಿದು ಜೀವನದ ಹೆಚ್ಚಿನೆಲ್ಲ ರಂಗಗಳನ್ನು ಅತ್ಯಂತ ಚುಟುಕಾಗಿ, ಸರಳ ರೀತಿಯಲ್ಲಿ ಪರಿಚಯಿಸಲು ಪ್ರಯತ್ನಿಸಿದ್ದಾರೆ. ಅದೇ ರೀತಿ, ಸೃಷ್ಟಿಕರ್ತನಾದ ಅಲ್ಲಾಹ್ ಮತ್ತು ಆತನ ಗುಣ ವಿಶೇಷತೆಗಳು, ಪ್ರವಾದಿತ್ವ, ಪ್ರವಾದಿಗಳ ಆಗಮನೋದ್ದೇಶ ಪ್ರವಾದಿತ್ವ ಪರಿಸಮಾಪ್ತಿ, ಅಂತಿಮ ಪ್ರವಾದಿಯವರ(ಸ) ದೌತ್ಯ ಹಾಗೂ ಪರಲೋಕದ ಕುರಿತು ಸರಿಯಾದ ಕಲ್ಪನೆಯನ್ನು ಮನಮೋಹಕ ಶೈಲಿಯಲ್ಲಿ ಪರಿಚಯಿಸಿದ್ದಾರೆ. ಈ ಕೃತಿಯ ಬಗ್ಗೆ 'ಸಾಗರವನ್ನು ಹೂಜಿಯಲ್ಲಿ ತುಂಬಲಾಗಿದೆ' ಎಂದು ಹೇಳಿದರೆ ಅತಿಶಯೋಕ್ತಿ ಯಾಗಲಾರದು. ಇದರ ಅಧ್ಯಯನವು ಸಮಗ್ರ ಇಸ್ಲಾಮಿನ ಕುರಿತು ಅಧ್ಯಯನಕ್ಕೆ ಪ್ರೇರಕವಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

# ಇಸ್ಲಾಮ್-ಸಂಕ್ಷಿಪ್ತ ಪರಿಚಯ

ಮನುಷ್ಯನ ಶರೀರಕ್ಕೆ ಆಹಾರ, ನೀರು ಮತ್ತು ಗಾಳಿಯ ಅವಶ್ಯಕತೆಯಿರುವಂತೆಯೇ ಅವನ ಆತ್ಮಕ್ಕೂ ಆಹಾರದ ಅವಶ್ಯಕತೆಯಿದೆ. ಆತ್ಮ ಮತ್ತು ಮನಸ್ಸಿನ ಆಹಾರವು ಧರ್ಮ ಮತ್ತು ವಿಶ್ವಾಸವಾಗಿದೆ. ಆದ್ದರಿಂದಲೇ ಆದಿಮಾನವ [ಆದಮ್(ಅ)]ರಿಂದ ಹಿಡಿದು ಈ ವರೆಗಿನ ಎಲ್ಲ ಕಾಲದ ಜನರೂ ಧರ್ಮ ವಿಶ್ವಾಸಿಗಳೇ ಆಗಿರುವುದು ಕಂಡು ಬರುತ್ತದೆ.

ಧರ್ಮವು ಕೆಲವು ವಿಶ್ವಾಸ-ನಂಬಿಕೆಗಳ ಆಧಾರದ ಮೇಲೆ ನಿಂತಿದೆ. ಈ ಪೈಕಿ ಮೊದಲನೆಯದು ದೇವರ ಮೇಲಿನ ವಿಶ್ವಾಸವಾಗಿದೆ. ಎಲ್ಲ ಕಾಲದ ಜನರೂ ಈ ವಿಶ್ವಾಸವನ್ನು ಹೊಂದಿರುತ್ತಾರೆ. ಕೇವಲ ಒಂದು ಸಣ್ಣ ವಿಭಾಗವೊಂದು ತಮ್ಮನ್ನು ನಾಸ್ತಿಕರೆಂದು ವಾದಿಸಿದರೂ ಅವರ ಮನದಾಳದಲ್ಲಿ ಈ ವಿಶ್ವಾಸವು ಇದ್ದೇ ಇರುತ್ತದೆ. ಆದ್ದರಿಂದಲೇ ದೊಡ್ಡ ವಿಪತ್ತೇನಾದರೂ ಎರಗಿದರೆ ಅಥವಾ ಮಾರಣಾಂತಿಕ ಕಾಯಿಲೆಗೆ ತುತ್ತಾದರೆ ಅವರು ತಮ್ಮನ್ನು ಸಂದರ್ಶಿಸುವವರೊಡನೆ 'ನನಗಾಗಿ ಪ್ರಾರ್ಥಿಸಿರಿ' ಎಂದು ಹೇಳುವುದುಂಟು.

## ದೇವನ ಗುಣ ವಿಶೇಷಗಳು

ದೇವನಿಗೆ ಅನೇಕ ಗುಣ ವಿಶೇಷಗಳಿವೆ. ಅವುಗಳ ಮೇಲೆ ಮಾನವ ಹಿಂದಿನಿಂದಲೂ ನಂಬಿಕೆಯಿರಿಸುತ್ತಾ ಬಂದಿದ್ದಾನೆ. ಅವುಗಳ ಪೈಕಿ ಒಂದನೆಯದು, ಅವನ ಏಕತ್ವದ ಗುಣವಾಗಿದೆ. ಅವನು ಸಾಟಿಯಿಲ್ಲದವನು. ಅವನಿಗೆ ಸರಿಸಮಾನರು

ಯಾರೂ ಇಲ್ಲ. ಮಾನವನ ಸಹಿತ ಭೂಮ್ಯಾಕಾಶಗಳನ್ನೊಳಗೊಂಡ ಈ ಪ್ರಪಂಚವನ್ನು ಅವನೊಬ್ಬನೇ ಸೃಷ್ಟಿಸಿದನು. ಇದರಲ್ಲಿ ಅವನಿಗೆ ಸಹಾಯಕರಾಗಲಿ, ಪಾಲುದಾರರಾಗಲಿ ಯಾರೂ ಇಲ್ಲ ಎಂಬುದು ಈ ಮೂಲಭೂತ ವಿಶ್ವಾಸದ ಒಂದು ಭಾಗವಾಗಿದೆ.

ಎರಡನೆಯದು, ದೇವನು ಸರ್ವಶಕ್ತನು ಮತ್ತು ಸರ್ವಜ್ಞನು ಎಂಬ ವಿಶ್ವಾಸ. ಅವನ ಶಕ್ತಿ ಮತ್ತು ಜ್ಞಾನ ಅಪಾರವಾಗಿದ್ದು ಅದಕ್ಕೆ ಮಿತಿ ಮೇರೆಗಳೇ ಇಲ್ಲ.

ಮೂರನೆಯದು, ಅವನು ಸರ್ವವ್ಯಾಪಿ, ಅವನನ್ನು ಎಲ್ಲಿಂದ ಪ್ರಾರ್ಥಿಸಿದರೂ ಅವನು ಆಲಿಸುತ್ತಾನೆ. ಮಾನವನ ಕಂಠನಾಡಿಗಿಂತಲೂ ಅವನು ಹತ್ತಿರವಿದ್ದಾನೆ ಎಂಬ ವಿಶ್ವಾಸ.

ನಾಲ್ಕನೆಯದು, ಅವನು ನಿರಾಕಾರನು. ಅವನಿಗೆ ಯಾವುದೇ ಆಕಾರವಿಲ್ಲ ಎಂಬ ವಿಶ್ವಾಸ. ಮಾನವನು ತನ್ನ ಊಹೆಯಿಂದ ರಚಿಸುವ ಅವನ ರೂಪಗಳಾವುದೂ ಅವನಿಗೆ ಅನ್ವಯಿಸುವುದಿಲ್ಲ, ಅವನು ಅವೆಲ್ಲವುಗಳಿಗಿಂತಲೂ ಮಿಗಿಲಾದ, ಮಾನವನ ಊಹೆಗೂ ಮೀರಿದ ಅಸ್ತಿತ್ವವುಳ್ಳವನಾಗಿದ್ದಾನೆ.

ಈ ಎಲ್ಲ ವಿಶ್ವಾಸ-ನಂಬಿಕೆಗಳು ಮಾನವನ ಸ್ವಯಂಕೃತವಲ್ಲ, ಅದು ಆದಿಯಿಂದಲೇ ದೇವನ ಕಡೆಯಿಂದ ಮಾನವನಿಗೆ ಬೋಧಿಸಲ್ಪಟ್ಟವುಗಳಾಗಿವೆ.

ಮಾನವರೂ ಸೇರಿದಂತೆ ಈ ಸಕಲ ಪ್ರಪಂಚವನ್ನು ಸೃಷ್ಟಿಸಿದ ಆ ದೇವನನ್ನು ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ಅರಬಿ ಭಾಷೆಯಲ್ಲಿ 'ಅಲ್ಲಾಹ್' ಎಂದು ಕರೆಯಲಾಗುತ್ತದೆ. 'ಅಲ್ಲಾಹ್' ಎಂದರೆ ಮುಸ್ಲಿಮರ ದೇವರೆಂದು ಅರ್ಥವಲ್ಲ, ಅವನು ಸಕಲ ಮಾನವರ ದೇವನಾಗಿದ್ದಾನೆ. ದೇವರು ಎಂಬ ಪದಕ್ಕೆ 'ಇಲಾಹ್' ಎಂದು ಅರಬಿಯಲ್ಲಿ ಅರ್ಥವಿದೆ. ನೈಜ 'ಇಲಾಹ್' ಕೇವಲ ಒಬ್ಬನಾಗಿದ್ದಾನೆ. ಅವನೇ 'ಅಲ್ಲಾಹ್.' ಆದ್ದರಿಂದಲೇ ಇಸ್ಲಾಮಿನ ಮೂಲ ಮಂತ್ರ 'ಲಾ ಇಲಾಹ ಇಲ್ಲಲ್ಲಾಹ್' ಎಂದು ನಿಶ್ಚಯಿಸಲಾಗಿದೆ. ಅಂದರೆ "ಅಲ್ಲಾಹನ ಹೊರತು ಅನ್ಯ ದೇವರಿಲ್ಲ." ಇದರಲ್ಲಿ ಎಲ್ಲ ಮಿಥ್ಯ ದೇವರುಗಳ ನಿರಾಕರಣೆಯಿದ್ದು ಕೇವಲ ಒಬ್ಬ ಅಲ್ಲಾಹನನ್ನು ಮಾತ್ರ ದೇವನೆಂದು ಪ್ರತಿಪಾದಿಸಲಾಗಿದೆ.

## ದೇವನ ಪ್ರವಾದಿಗಳು

ದೇವನು ಮಾನವರಿಗೆ ತನ್ನ ಸಂದೇಶವನ್ನು ಮುಟ್ಟಿಸಲಿಕ್ಕಾಗಿ ಮಾನವರಿಂದಲೇ ಕೆಲವು ಅತ್ಯುತ್ತಮ ವ್ಯಕ್ತಿಗಳನ್ನು ಆರಿಸಿದನು. ಮಾನವನ ಪಂಚೇಂದ್ರಿಯಕ್ಕೆ ಅತೀತವಾದ ಪರೋಕ್ಷ ಜ್ಞಾನವನ್ನು ಅವರಿಗೆ ನೀಡಿದನು. ಅವರನ್ನು 'ಪ್ರವಾದಿಗಳು' ಎನ್ನಲಾಗುತ್ತದೆ. ಇತಿಹಾಸದುದ್ದಕ್ಕೂ ಲೋಕದ ನಾನಾ ಭಾಗಗಳಿಗೆ ಈ ರೀತಿ ಪ್ರವಾದಿಗಳನ್ನು ನೇಮಿಸಲಾಗಿತ್ತು. ಆದಿ ಮಾನವ ಹಾಗೂ ನಮ್ಮೆಲ್ಲರ ಆದಿಪಿತ ಆದಮ್(ಅ) ಕೂಡಾ ಪ್ರವಾದಿಯಾಗಿದ್ದರು. ಅವರಿಗೆ ದೇವನು ತನ್ನ ದೂತರ (ದೇವಚರರು) ಮೂಲಕ ಸಂದೇಶವನ್ನು ಕಳಿಸಿದನು. ಆ ಸಂದೇಶದಲ್ಲಿ ಮೇಲೆ ಹೇಳಿದ ವಿಶ್ವಾಸಗಳಲ್ಲದೆ ಮರಣಾನಂತರದ ಜೀವನದ ಮೇಲೆಯೂ ವಿಶ್ವಾಸವಿರಿಸ ಬೇಕೆಂದಿದೆ.

## ಮರಣಾನಂತರ ಜೀವನ

ಎಲ್ಲ ಪ್ರವಾದಿಗಳು ತಿಳಿಸಿರುವಂತೆ, ಮಾನವನು ಮರಣ ಹೊಂದಿದಾಗ ಅವನ ಶರೀರವು ಅಳಿದು ಹೋಗುತ್ತದೆ. ಆದರೆ ಅವನ ಆತ್ಮ ಸಾಯುವುದಿಲ್ಲ. ಅದಕ್ಕೆ ಮರಣವಿಲ್ಲ. ಮರಣವೆಂದರೆ, ಆತ್ಮವು ಶರೀರವನ್ನು ಬಿಟ್ಟಗಲುವುದಾಗಿದೆ. ಮರಣ ಹೊಂದಿದ ನಂತರ ಈ ಆತ್ಮಗಳೆಲ್ಲ ಬೇರೊಂದು ಅಜ್ಞಾತ ಲೋಕದಲ್ಲಿರುತ್ತವೆ. ಪುನರುತ್ಥಾನ ದಿನದಂದು ಅವುಗಳಿಗೆ ಶರೀರ ಕೊಡಲಾಗುವುದು. ಅನಂತರ ಪ್ರತಿಯೊಬ್ಬನ ಕರ್ಮಗಳ ವಿಚಾರಣೆ ನಡೆಸಲಾಗುವುದು. ವಿಚಾರಣೆಯ ವೇಳೆ ಉತ್ತೀರ್ಣರಾದವರನ್ನು ಸ್ವರ್ಗಕ್ಕೂ ಅನುತ್ತೀರ್ಣರಾದವರನ್ನು ನರಕಕ್ಕೂ ಕಳುಹಿಸಲಾಗುವುದು.

ಈ ಪುನರುಜ್ಜೀವನ ಮತ್ತು ಸ್ವರ್ಗ-ನರಕಗಳ ಕಲ್ಪನೆ ಎಲ್ಲ ಮಾನವರಲ್ಲೂ ಇದೆ. ಭಾರತದಲ್ಲೂ ಪ್ರಾಚೀನ ಜನಾಂಗಗಳಲ್ಲಿ ಒಂದಲ್ಲೊಂದು ರೀತಿಯಲ್ಲಿ ಈ ವಿಶ್ವಾಸ ಇರುವುದು ಕಂಡುಬರುತ್ತದೆ.

## ಒಬ್ಬರ ನಂತರ ಒಬ್ಬರಂತೆ ಪ್ರವಾದಿಗಳ ಆಗಮನ

ಮಾನವರಲ್ಲಿ ಮರೆಯುವ ಸ್ವಭಾವವಿದೆ. ಹಾಗೆಯೇ ಹೊಸತನ್ನು ಕಂಡು

ಹಿಡಿದು ಅದನ್ನು ಸ್ವೀಕರಿಸುವ ಗುಣವೂ ಇದೆ. ಇದರಲ್ಲಿ ಮೇಲೆ ಹೇಳಿದ ಮೂಲಭೂತ ವಿಶ್ವಾಸಗಳನ್ನು ಮರೆತು ಬಿಡುವ ಸಂದರ್ಭಗಳು ಇತಿಹಾಸದಲ್ಲಿ ಪದೇ ಪದೇ ನಡೆಯಿತು. ಜನರು ಪ್ರವಾದಿಗಳು ಬೋಧಿಸಿದ ಸಂದೇಶಗಳಲ್ಲಿ ಕಲಬೆರಕೆ ಮಾಡಿದರು. ಅಂದರೆ ಸತ್ಯ-ಮಿಥ್ಯ. ನ್ಯಾಯ-ಅನ್ಯಾಯ, ಒಳಿತು-ಕೆಡುಕು, ಶುದ್ಧ-ಅಶುದ್ಧ, ಧರ್ಮಬದ್ಧವಾದುದು ಯಾವುದು, ಧರ್ಮಬಾಹಿರ ವಾದುದು ಯಾವುದು ಎಂದು ಅವರಿಗೆ ತಿಳಿಯದೆ ಹೋಯಿತು. ಇಂತಹ ಸಂದರ್ಭಗಳಲ್ಲಿ ಪ್ರವಾದಿಗಳನ್ನು ಕಳುಹಿಸಿ ಜನರನ್ನು ಅದೇ ಮೂಲಭೂತ ವಿಶ್ವಾಸದ ಕಡೆಗೆ ಕರೆದು ಅವರನ್ನು ಸರಿದಾರಿಗೆ ತರುವ ವ್ಯವಸ್ಥೆ ಮಾಡಿದನು.

## ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಪ್ರವಾದಿಗಳು

ಭೂಮಿಯ ಮೇಲೆ ಜನಸಂಖ್ಯೆ ಹೆಚ್ಚಿದಂತೆಲ್ಲ ಅವರು ಭೂಮಿಯ ನಾನಾ ಭಾಗಗಳಿಗೆ ಹರಡಿದರು. ಎಲ್ಲ ಕಡೆಗಳಿಗೂ ದೇವನು ಪ್ರವಾದಿಗಳನ್ನು ಕಳಿಸಿದನು. ಹೀಗೆ ಅಂತ್ಯ ಪ್ರವಾದಿ ಮುಹಮ್ಮದ್‌ರವರ(ಸ)ವರೆಗೆ ಸಾವಿರಾರು ಪ್ರವಾದಿಗಳನ್ನು ಕಳಿಸಲಾಯಿತು. ಪವಿತ್ರ ಕುರ್‌ಆನಿನ ಪ್ರಕಾರ, **"ನಾವು ಪ್ರತಿಯೊಂದು ಸಮುದಾಯದಲ್ಲಿ ಓರ್ವ ಸಂದೇಶವಾಹಕನನ್ನು ಕಳುಹಿಸಿದೆವು."**

**(ಪವಿತ್ರ ಕುರ್‌ಆನ್, 16:36)**

ಆದ್ದರಿಂದ ಭಾರತದ ಬೇರೆ ಬೇರೆ ಪ್ರದೇಶಗಳಿಗೆ ಪ್ರವಾದಿಗಳು ಬಂದಿರಬಹುದು. ಅವರೆಲ್ಲರ ಮೂಲ ಸಂದೇಶ ಒಂದೇ ಆಗಿತ್ತು. 'ಅಲ್ಲಾಹನ ಮೇಲೆ ಮತ್ತು ಪರಲೋಕ ಜೀವನದ ಮೇಲೆ ವಿಶ್ವಾಸವಿಟ್ಟು ಜೀವನ ನಡೆಸಬೇಕೆಂಬುದಾಗಿದೆ.'

ಆದರೆ ಒಬ್ಬ ಪ್ರವಾದಿ ಬಂದು ಜನರನ್ನು ಸುಧಾರಿಸಿ ಅವರು ಲೋಕದಿಂದ ನಿರ್ಗಮಿಸಿದ ನಂತರ ಅವರ ಅನುಯಾಯಿಗಳು ಅವರ ಸಂದೇಶವನ್ನು ಮರೆತು ಬೇರೆಯೇ ದಾರಿಯನ್ನು ಹಿಡಿಯುತ್ತಿದ್ದರು. ಆ ಸಂದರ್ಭದಲ್ಲಿ ಅವರಿಗೆ ಸರಿಯಾದ ದಾರಿಯನ್ನು ತೋರಿಸಿಕೊಡಲಿಕ್ಕಾಗಿ ದೇವನು ಮತ್ತೊಬ್ಬ ಪ್ರವಾದಿಯನ್ನು ನೇಮಿಸುತ್ತಿದ್ದನು. ಅವರ ಕರೆಯನ್ನು ಕೆಲವರು ಸ್ವೀಕರಿಸಿ ಅವರನ್ನು

ಅನುಸರಿಸುತ್ತಿದ್ದರು. ಆದರೆ ಹೆಚ್ಚಿನವರು ವಿರೋಧಿಸುತ್ತಿದ್ದರು. ಹೀಗಾಗಿ ಅನುಸರಿಸಿದವರ ಧರ್ಮ ಬೇರೆ, ವಿರೋಧಿಸಿದವರ ಧರ್ಮ ಬೇರೆಯಾಯಿತು. ಆದರೆ ಎಲ್ಲ ಪ್ರವಾದಿಗಳ ಧರ್ಮ ಒಂದೇ (ಇಸ್ಲಾಮ್ ಅರ್ಥಾತ್, ದೇವನಿಗೆ ಶರಣಾಗಿ ಬಾಳುವುದು.) ಆಗಿರುವುದರಿಂದ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಪ್ರವಾದಿಗಳನ್ನು ವಿರೋಧಿಸಿದವರು ತಮ್ಮದೇ ಆದ ವಿಧಾನದಂತೆ ಅಥವಾ ಧರ್ಮದಂತೆ ಜೀವಿಸತೊಡಗಿದರು. ಈ ರೀತಿ ಲೋಕದಲ್ಲಿ ನಾನಾ ಮತ ಧರ್ಮಗಳು ಹುಟ್ಟಿಕೊಂಡುವು. ಅವೆಲ್ಲ ಮೂಲ ಧರ್ಮದಿಂದ ವ್ಯತಿಚಲಿಸಿದ ಕಾರಣದಿಂದಾಗಿತ್ತು.

ಆದಿ ಮಾನವರಾದ ಪ್ರವಾದಿ ಆದಮ್‌ರ(ಅ) ಕಾಲಾನಂತರ ಜನರು ಸತ್ಯ ಮಾರ್ಗವನ್ನು ಬಿಟ್ಟು ತಪ್ಪು ಹಾದಿ ಹಿಡಿದಾಗ, ಪ್ರವಾದಿ ನೂಹರನ್ನು(ಅ) ನೇಮಿಸಲಾಯಿತು. ಆದರೆ ಅವರ ಮೇಲೆ ಬಹಳ ಕಡಿಮೆ ಮಂದಿ ವಿಶ್ವಾಸ ತಾಳಿದರು. ಹೆಚ್ಚಿನವರು ಅವರನ್ನು ವಿರೋಧಿಸಿದರು. ಪ್ರವಾದಿ ನೂಹರು(ಅ) ಅನೇಕ ವರ್ಷಗಳ ತನಕ ಬೋಧಿಸಿದರೂ ಜನರು ಸರಿದಾರಿಗೆ ಬರದೆ ಇದ್ದಾಗ ದೇವನು ಅವರ ಜನಾಂಗವನ್ನು ಜಲಪ್ರಳಯದಂತಹ ಯಾತನೆಯ ಮೂಲಕ ನಾಶ ಪಡಿಸಿದನು. ತದನಂತರ ಹೂದ್‌ರ(ಅ) ಸಮುದಾಯವಾದ 'ಆದ್'ರನ್ನು ನಿರಂತರ ಏಳು ದಿನಗಳ ಚಂಡಮಾರುತದ ಮೂಲಕ ಯಾತನೆ ನೀಡಿ ನಾಶಪಡಿಸಿದನು. ಸಾಲಿಹ್‌ರ(ಅ) ಸಮೂದ್ ಗೋತ್ರವನ್ನು ಘನಸ್ಫೋಟದಂತಹ ಘನ ಘರ್ಜನೆಯ ಮೂಲಕ ನಾಶಪಡಿಸಲಾಯಿತು. ಲೂತ್‌ರ(ಅ) ಸಮುದಾಯವನ್ನು ಜ್ವಾಲಾಮುಖಿಯ ಸ್ಫೋಟದಲ್ಲಿ, ಬೆಂಕಿಯಂತಹ ಕಲ್ಲಿನ ಮಳೆಯೊಂದಿಗೆ ಮಳೆಗರೆದು ನಾಶಪಡಿಸಿದನು. ಈ ಎಲ್ಲಾ ಪ್ರವಾದಿಗಳ ಮೇಲೆ ವಿಶ್ವಾಸ ತಂದವರನ್ನು ಅಲ್ಲಾಹನು ರಕ್ಷಿಸಿದನು. ಅವರ ಅನುಯಾಯಿಗಳನ್ನು ಭೂಮಿಯಲ್ಲಿ ವಾಸಗೊಳಿಸಿದನು. ಕ್ರಮೇಣ ಅವರೂ ತಪ್ಪು ದಾರಿಯಲ್ಲಿ ಸಾಗತೊಡಗಿದಾಗ ಪ್ರವಾದಿ ಇಬ್ರಾಹೀಮರ(ಅ) ನೇಮಕವಾಯಿತು. ಅವರನ್ನು ಜನರು ವಿರೋಧಿಸಿದಾಗ ಅವರು ಫೆಲೆಸ್ತೀನ್‌ನಲ್ಲಿ ನೆಲೆಸಿದರು. ಅಲ್ಲಿ ಅವರಿಗೆ ಇಸ್ಮಾಈಲ್ ಮತ್ತು ಇಸ್ಹಾಕ್ ಎಂಬ ಇಬ್ಬರು ಪುತ್ರರು ಜನಿಸಿದರು. ತನ್ನ ಸಂದೇಶ ಪ್ರಚಾರ ಚಟುವಟಿಕೆಗಳನ್ನು ಮುಂದುವರಿಸಲು ಇಬ್ರಾಹೀಮರು(ಅ) ತನ್ನ ಓರ್ವ

ಪುತ್ರ ಇಸ್‌ಹಾಕ್‌ರನ್ನು ಫೆಲೆಸ್ತೀನ್‌ನಲ್ಲೂ ಇನ್ನೋರ್ವ ಪುತ್ರ ಇಸ್ಮಾಈಲರನ್ನು ಅರಬ್ ದೇಶದ ಮಕ್ಕಾ ಪಟ್ಟಣದಲ್ಲೂ ನೆಲೆಗೊಳಿಸಿದರು. ಮಕ್ಕಾ ಪಟ್ಟಣದಲ್ಲಿ ನೀರಿರಲಿಲ್ಲ. ಅಲ್ಲಿ ಪುಟ್ಟ ಮಗು ಇಸ್ಮಾಈಲರಿಗಾಗಿ ಅಲ್ಲಾಹನು ನೀರಿನ ಒರತೆಯೊಂದನ್ನು ಹರಿಸಿದನು. ಅದುವೇ ಝುಂಝುಂ ನೀರು. ಅದು ಕಳೆದ ನಾಲ್ಕು ಸಾವಿರ ವರ್ಷಗಳಿಂದಲೂ ಒಂದೇ ಸಮನಾಗಿ ಇಂದಿಗೂ ಹರಿಯುತ್ತಾ ಇದೆ. ಹಜ್ಜ್ ಪ್ರವಾಸದ ವೇಳೆ ಲಕ್ಷಾಂತರ ಜನರು ಅದರ ನೀರನ್ನು ಉಪಯೋಗಿಸುತ್ತಾರೆ. ತಮ್ಮ ದೇಶಗಳಿಗೆ ಕೊಂಡೊಯ್ಯುತ್ತಾರೆ. ದೊಡ್ಡ ಪಂಪ್ ಸೆಟ್‌ಗಳ ಮೂಲಕ ನೀರು ತೆಗೆಯಲಾಗುತ್ತದೆ. ಆದರೆ ಅದರಲ್ಲಿ ಒಂದು ತೊಟ್ಟೂ ಕಡಿಮೆಯಾಗುವುದಿಲ್ಲವೆಂಬುದು ಅದ್ಭುತ. ಇದೊಂದು ಮಹಾಪವಾಡವಾಗಿದೆ.

## ಕಅಬಾ ನಿರ್ಮಾಣ

ಕೆಲವು ವರ್ಷಗಳ ನಂತರ ಇಬ್ರಾಹೀಮ್(ಅ) ಅವರು ದೇವನ ಆಜ್ಞೆಯ ಪ್ರಕಾರ, ತಮ್ಮ ಪುತ್ರ ಇಸ್ಮಾಈಲ್‌ರೊಡಗೂಡಿ ಅಲ್ಲಿ ಒಂದು ಭವನವನ್ನು ನಿರ್ಮಿಸಿದರು. ಅದು ಒಬ್ಬನೇ ದೇವನ ಆರಾಧನೆಗಾಗಿ ಕಟ್ಟಿದ ಭವನವಾಗಿತ್ತು. ಆ ಭವನದ ಹೆಸರು ಕಅಬಾ. ಅದರ ಸಂದರ್ಶನಕ್ಕಾಗಿ ಪ್ರತಿವರ್ಷ ಹಜ್ಜ್ ತಿಂಗಳಲ್ಲಿ ಜನರು ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಅಲ್ಲಿಗೆ ಬರುತ್ತಾರೆ. ಅದರ ಪ್ರದಕ್ಷಿಣೆ ಮಾಡುತ್ತಾರೆ. ಹಜ್ಜ್ ಕರ್ಮವು ಇಸ್ಲಾಮಿನ ಪ್ರಮುಖವಾದ ಒಂದು ಆರಾಧನಾ ಕರ್ಮವಾಗಿದೆ. ಅಲ್ಲಿಗೆ ಹೋಗುವ ಸಾಮರ್ಥ್ಯ ಹೊಂದಿದ ಪ್ರತಿಯೊಬ್ಬ ಮುಸ್ಲಿಮನ ಮೇಲೆ ಜೀವಮಾನದಲ್ಲೊಮ್ಮೆ ಅದರ ಸಂದರ್ಶನ ಕಡ್ಡಾಯವಾಗಿದೆ. ಇಬ್ರಾಹೀಮ್(ಅ) ಅವರ ಕಾಲದ ನಂತರ ಅವರ ಅನುಯಾಯಿಗಳು ಅನೇಕ ವರ್ಷಗಳ ಕಾಲ ಏಕದೇವ ವಿಶ್ವಾಸಿಗಳಾಗಿಯೇ ಇದ್ದರು. ಆದರೆ ಅನಂತರ ಅವರಲ್ಲಿ ಕೆಡುಕು, ಮೂರ್ತಿಪೂಜೆ ಹುಟ್ಟಿಕೊಂಡಿತು. ಕಅಬಾ ಭವನದಲ್ಲೇ ಅವರು ಮೂರ್ತಿಗಳನ್ನು ತಂದು ಪ್ರತಿಷ್ಠಾಪಿಸಿದರು. ಇದಲ್ಲದೆ ಇನ್ನೂ ಅನೇಕ ಕೆಡುಕುಗಳು ಅವರಲ್ಲಿ ಹುಟ್ಟಿಕೊಂಡಿತು. ಉದಾ: ಗೋತ್ರಗಳ ನಡುವೆ ತಿಕ್ಕಾಟ, ಯುದ್ಧ, ಮಾನವ ಹತ್ಯೆ, ವ್ಯಾಪಾರಿ ತಂಡಗಳ ಮೇಲೆ ಹಲ್ಲೆ, ಲೂಟಿ, ಕಳ್ಳತನ, ದರೋಡೆ,

ವ್ಯಭಿಚಾರ, ಮದ್ಯಪಾನ-ಇದರಲ್ಲಿ ಪೈಪೋಟಿ, ಮಹಿಳೆಯರ ಮೇಲೆ ಅತ್ಯಾಚಾರ, ದೌರ್ಜನ್ಯ, ಹೆಣ್ಣು ಮಕ್ಕಳ ಮೇಲೆ ತಿರಸ್ಕಾರ ಭಾವ, ಅವರ ವಧೆ ಇತ್ಯಾದಿ.

## ಯಅ್‌ಕೂಬ್(ಅ)

ಪ್ರವಾದಿ ಇಬ್ರಾಹೀಮ್‌ರ(ಅ) ಎರಡನೆಯ ಪುತ್ರ ಇಸ್ಹಾಕರ(ಅ) ಪುತ್ರ ಯಅ್‌ಕೂಬರ(ಅ) ಇನ್ನೊಂದು ಹೆಸರು ಇಸ್ರಾಈಲ್ ಎಂದಾಗಿತ್ತು. ಅವರ ಸಂತತಿಯನ್ನು ಬನೀ ಇಸ್ರಾಈಲ್ ಎಂದು ಕರೆಯಲಾಯಿತು. ಬನೀ ಇಸ್ರಾಈಲರು ಕೆಲವು ಕಾಲ ದೇವನ ಆದೇಶಗಳಂತೆ ಪ್ರವಾದಿಗಳನ್ನು ಅನುಸರಿಸಿ ನಡೆದರು. ಆದರೆ ಕ್ರಮೇಣ ಅವರೊಳಗೆ ಕೆಡುಕುಗಳು ನುಸುಳಿ ಅವರು ದಾರಿ ತಪ್ಪಿದಾಗ ಅವರನ್ನು ಸರಿದಾರಿಗೆ ತರಲು ಪ್ರವಾದಿಗಳು ಬರತೊಡಗಿದರು. ಆದರೆ ಅವರು ಪ್ರವಾದಿಗಳನ್ನು ನಿರಾಕರಿಸಿದರು. ಅವರನ್ನು ಸುಳ್ಳಾಗಿಸಿದರು. ತಮ್ಮ ಜನಾಂಗದ ಹೆಸರನ್ನೇ ಬದಲಾಯಿಸಿ 'ಯಹೂದಿಯರು' ಎಂದು ಹೆಸರಿಟ್ಟರು. ಸಂದೇಶ ವಾಹಕರಾದ ಮೂಸಾ(ಅ) ಆ ಜನಾಂಗದಲ್ಲೇ ಜನಿಸಿದ್ದರು. ಅವರಿಗೆ 'ತೌರಾತ್' ಎಂಬ ಗ್ರಂಥ ನೀಡಲ್ಪಟ್ಟಿತು. ಮೂಸಾರ(ಅ) ಅನುಯಾಯಿಗಳಲ್ಲೂ ಕೆಡುಕು ವ್ಯಾಪಾಕವಾಗಿ ಅವರು ದಾರಿ ತಪ್ಪಿದಾಗ, ಅವರನ್ನು ಸನ್ಮಾರ್ಗದ ಕಡೆಗೆ ಕರೆಯಲು ಈಸಾರನ್ನು(ಅ) ದೇವನು ಕಳಿಸಿದನು. ಅವರನ್ನು ತಂದೆಯಿಲ್ಲದೆಯೇ ಪವಾಡ ಸದೃಶವಾಗಿ ಮರ್ಯಮರ(ಅ) ಗರ್ಭದಲ್ಲಿ ಸೃಷ್ಟಿಸಿದನು. ಅವರಿಗೆ 'ಇಂಜೀಲ್' ಎಂಬ ಗ್ರಂಥವನ್ನು ನೀಡಲಾಯಿತು.

ಆದರೆ ಯಹೂದಿ ಜನಾಂಗದವರು ಈಸಾರನ್ನು(ಅ) ನಂಬಲಿಲ್ಲ. ಈಸಾರು(ಅ) ದೇವನ ಕಡೆಯಿಂದ ತೋರಿಸಿದ ಕೆಲವು ಪವಾಡಗಳನ್ನು ಯಹೂದಿಯರು ನಿರಾಕರಿಸಿದರು. ತಾವು ಗ್ರಂಥದವರು ತಮಗೆ ಯಾವ ಪ್ರವಾದಿಯ ಅಗತ್ಯವಿಲ್ಲವೆಂಬ ಅಹಂಭಾವದಲ್ಲಿ ಬಿದ್ದು ಬಿಟ್ಟರು. ಅಷ್ಟೇ ಅಲ್ಲ, ಅವರು ಈಸಾರ(ಅ) ವೈರಿಗಳಾದರು. ಅವರನ್ನು ಶಿಲುಬೆಗೇರಿಸುವ ಕುಪ್ರಯತ್ನ ನಡೆಸಿದರು. ಆದರೆ ದೇವನು ತನ್ನ ಪ್ರವಾದಿಯನ್ನು ಶತ್ರುಗಳಿಂದ ರಕ್ಷಿಸಿದನು. ಅವರನ್ನು ತನ್ನ ಕಡೆಗೆ ಎತ್ತಿಕೊಂಡನು. ಆದರೆ ಯಹೂದಿಯರು ತಾವು ಈಸಾರನ್ನು(ಅ) ವಧಿಸಿದ್ದೇವೆಂದು ಪ್ರಚಾರ

ಮಾಡತೊಡಗಿದರು. ಯಹೂದಿಯರು ಶಿಲುಬೆಗೇರಿಸಿದ್ದು ಬೇರಾರೋ ಒಬ್ಬನನ್ನು! ಅದು ಈಸಾ(ಅ) ಆಗಿರಲಿಲ್ಲ..

ಈ ರೀತಿ ಯಹೂದಿ ಧರ್ಮ, ಕ್ರೈಸ್ತ ಧರ್ಮ ಹಾಗೂ ಇನ್ನಿತರ ಅನೇಕ ಧರ್ಮಗಳು ಹುಟ್ಟಿಕೊಂಡವು. ಆದರೆ ಎಲ್ಲದರ ಮೂಲ ಧರ್ಮ ಒಂದೇ ಆಗಿತ್ತು ಎಂಬುದನ್ನು ಮರೆಯಲಾಗದು. ಮೂಲ ಧರ್ಮದಿಂದ ವ್ಯತಿಚಲಿಸಿದ ಕಾರಣ ದಿಂದಾಗಿಯೇ ಅನೇಕ ಮತ ಧರ್ಮಗಳು ಹುಟ್ಟಿಕೊಂಡುವು.

## ಮುಹಮ್ಮದ್(ಸ) ದೇವನ ಅಂತಿಮ ಪ್ರವಾದಿ

ಒಂದೆಡೆ ಲೋಕದಲ್ಲಿ ಹಲವು ಧರ್ಮಗಳು ಉಂಟಾದರೆ, ಇನ್ನೊಂದೆಡೆ ಆದಿಯಲ್ಲಿ ಇದ್ದ ಮೂಲ ವಿಶ್ವಾಸಗಳು ದುರ್ಬಲಗೊಂಡುವು. ಅದರಿಂದಾಗಿ ಆಚಾರ ವಿಚಾರಗಳಲ್ಲಿ ಕುಂದು ಕೊರತೆಯುಂಟಾಯಿತು. ಅನೇಕ ರೀತಿಯ ಅನಾಚಾರಗಳು ಹುಟ್ಟಿಕೊಂಡವು. ಇಂತಹ ಸನ್ನಿವೇಶದಲ್ಲಿ ಸಕಲ ಮಾನವರಿಗಾಗಿ ಒಂದು ಸಂಪೂರ್ಣವೂ ಸಮಗ್ರವೂ ಆದ ಧರ್ಮದ ಅಗತ್ಯ ತಲೆದೋರಿತು. ಅಂತಹ ಧರ್ಮ ಅಥವಾ ಜೀವನ ವಿಧಾನವನ್ನು ಬೋಧಿಸಲಿಕ್ಕೆ ಮತ್ತು ಅದರ ಆಧಾರದಲ್ಲಿ ಒಂದು ಸಮಾಜದ ಸ್ಥಾಪನೆಗೆ ಓರ್ವ ಕೊನೆಯ ಪ್ರವಾದಿಯನ್ನು ದೇವನು ನೇಮಕ ಮಾಡಿದನು. ಕಅಬಾ ಭವನವಿರುವ ಮಕ್ಕಾ ಪಟ್ಟಣದಲ್ಲಿ ಪ್ರವಾದಿ ಮುಹಮ್ಮದ್(ಸ) ಜನಿಸಿದರು. ಬಾಲ್ಯದಿಂದಲೇ ಸತ್ಯಸಂಧನಾಗಿ, ಪ್ರಾಮಾಣಿಕನಾಗಿ ಬೆಳೆದ ಅವರು ಜನಿಸುವುದಕ್ಕೆ ಮುಂಚೆಯೇ ತಂದೆಯನ್ನು ಕಳಕೊಂಡಿದ್ದರು. ತಮ್ಮ ಆರನೇ ವರ್ಷ ಪ್ರಾಯದಲ್ಲಿ ತಾಯಿಯನ್ನೂ ಕಳಕೊಂಡರು. ಪಿತಾಮಹ ಅಬ್ದುಲ್ ಮುತ್ತಲಿಬ್, ಅನಂತರ ಚಿಕ್ಕಪ್ಪ ಅಬೂತಾಲಿಬ್‌ರ ಆರೈಕೆಯಲ್ಲಿ ಬೆಳೆದರು. ತಮ್ಮ 25ನೆಯ ವರ್ಷದಲ್ಲಿ 40 ವರ್ಷ ಪ್ರಾಯದ ಖದೀಜ ಎಂಬ ವಿಧವೆಯನ್ನು ವಿವಾಹವಾದರು. ದುರ್ಬಲರು, ನಿರ್ಗತಿಕರು, ಅನಾಥರು, ವಿಧವೆಯರು ಮತ್ತು ಅಸಹಾಯಕರ ಸೇವೆಯು ಅವರ ಅಚ್ಚು ಮೆಚ್ಚಿನ ಕಾಯಕವಾಗಿತ್ತು. ಅವರೆಂದೂ ಸುಳ್ಳಾಡಿದವರಲ್ಲ. ಆದರೆ ಅವರು ಬದುಕಿದ್ದ ಸಮಾಜ ಮಾತ್ರ ಅತ್ಯಂತ ಕೆಟ್ಟು ಹೋಗಿತ್ತು. ಜನರು ವ್ಯಭಿಚಾರ, ಮದ್ಯಪಾನ,

ಬಡ್ಡಿ ವ್ಯವಹಾರ, ವಂಚನೆ, ಕೊಲೆ, ಸುಲಿಗೆ ಇತ್ಯಾದಿ ಅನೇಕಾನೇಕ ಕೆಡುಕುಗಳಲ್ಲಿ ಮುಳುಗಿ ಹೋಗಿದ್ದರು. ಮಹಿಳೆಯರಿಗೆ ಸಮಾಜದಲ್ಲಿ ಯಾವುದೇ ಸ್ಥಾನವಿರಲಿಲ್ಲ. ಈ ದುಸ್ಥಿತಿಯನ್ನು ಕಂಡು ಮರುಗುತ್ತಿದ್ದ ಮುಹಮ್ಮದ್(ಸ) ಮಕ್ಕಾದಿಂದ ದೂರದ ಹಿರಾ ಎಂಬ ಗುಹೆಯಲ್ಲಿ ಏಕಾಂತವಾಗಿ ದೇವ ಧ್ಯಾನದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

## ಪ್ರವಾದಿತ್ವ

ಹೀಗಿರಲು ಒಂದು ದಿನ ಹಿರಾಗುಹೆಯಲ್ಲಿ ಧ್ಯಾನಾಸಕ್ತರಾಗಿದ್ದ ವೇಳೆ ದೇವಚರ ಜಿಬ್ರೀಲ್(ಅ) ಪ್ರತ್ಯಕ್ಷರಾಗಿ ಅವರಿಗೆ ದೇವಸಂದೇಶವನ್ನು ತಲುಪಿಸಿದರು. ತಮ್ಮನ್ನು ಸಕಲ ಲೋಕದವರಿಗೆ ದೇವ ಸಂದೇಶವನ್ನು ತಲುಪಿಸಲು ಸಂದೇಶ ವಾಹಕನಾಗಿ ದೇವನು ಆಯ್ಕೆ ಮಾಡಿದ್ದಾನೆ. ಆದ್ದರಿಂದ ಎದ್ದೇಳಿರಿ. ಈ ಕಾರ್ಯದಲ್ಲಿ ತೊಡಗಿರಿ ಎಂದು ಹೇಳಿದರು. ಆಗ ಮುಹಮ್ಮದ್‌ರಿಗೆ(ಸ) 40 ವರ್ಷ ಪ್ರಾಯವಾಗಿತ್ತು.

## ಪವಿತ್ರ ಕುರ್‌ಆನ್

ಅಂದಿನಿಂದ ಮುಹಮ್ಮದ್(ಸ) ಅವರ ಮೇಲೆ ಕುರ್‌ಆನಿನ ಸೂಕ್ತಗಳು ಅವತೀರ್ಣಗೊಳ್ಳತೊಡಗಿದುವು. ನಿರಂತರ 23 ವರ್ಷಗಳ ಕಾಲ ಈ ಪ್ರಕ್ರಿಯೆ ಮುಂದುವರಿಯಿತು. ಜೀವನದ ಎಲ್ಲ ರಂಗಗಳಿಗೆ ಬೇಕಾದ ಕಾನೂನು, ನಿಯಮೋಪನಿಯಮಗಳು ಅದರಲ್ಲಿವೆ. ಕುರ್‌ಆನಿನ ಅವತೀರ್ಣ ಪೂರ್ಣಗೊಳ್ಳುವುದರ ಜೊತೆಯಲ್ಲಿ ಧರ್ಮವನ್ನು ಪರಿಪೂರ್ಣಗೊಳಿಸಲಾಯಿತು. ಪ್ರವಾದಿಯವರ ಕಾಲಾ ನಂತರ ಕುರ್‌ಆನಿನ ಸೂಕ್ತಗಳನ್ನು ಕ್ರೋಡೀಕರಿಸಿ ಒಂದು ಗ್ರಂಥದ ರೂಪ ನೀಡಲಾಯಿತು. ಅದುವೇ ಪವಿತ್ರ ಕುರ್‌ಆನ್ ಆಗಿದೆ. ಪವಿತ್ರ ಕುರ್‌ಆನ್ ಪ್ರವಾದಿ ಮುಹಮ್ಮದ್(ಸ) ಅವರು ಬರೆದ ಗ್ರಂಥವಲ್ಲ. ಅವರಿಗೆ ಓದು ಬರಹ ಬರುತ್ತಿರಲಿಲ್ಲ. ಅವರು ನಿರಕ್ಷರಿಯಾಗಿದ್ದರು. ಆ ಕಾಲದಲ್ಲಿ ಅಲ್ಲಿ ಶಾಲೆಗಳಿರಲಿಲ್ಲ. ಬೆರಳೆಣಿಕೆಯ ಕೆಲವೇ ಮಂದಿಗೆ ಓದಲು ಬರೆಯಲು ಬರುತ್ತಿತ್ತು.

ಪವಿತ್ರ ಕುರ್‌ಆನನ್ನು ದೇವನು ಪ್ರವಾದಿಯವರ(ಸ) ಹೃದಯಕ್ಕೆ ಜಿಬ್ರೀಲ್‌ರ(ಅ) ಎಂಬ ದೇವಚರನ ಮುಖಾಂತರ ಅವತೀರ್ಣಗೊಳಿಸಿದನು. ಪ್ರವಾದಿಯವರ(ಸ) ಬಾಯಿಯಿಂದ ಅದು ಅವತೀರ್ಣಗೊಂಡ ರೀತಿಯಲ್ಲೇ ಹೊರಡುತ್ತಿದ್ದುದು ಒಂದು ಪವಾಡವೇ ಆಗಿತ್ತು. ಕುರ್‌ಆನಿನ ಅಧ್ಯಯನ ನಡೆಸಿದವರಿಗೆ ಈ ವಾಸ್ತವಿಕತೆಯ ಅರಿವಾಗುತ್ತದೆ. ಇದರ ಇನ್ನೊಂದು ವಿಶೇಷವೇನೆಂದರೆ 1400 ವರ್ಷಗಳ ಹಿಂದೆ ಅವತೀರ್ಣಗೊಂಡ ಕುರ್‌ಆನ್ ಯಥಾರೂಪದಲ್ಲಿ ಉಳಿದುಕೊಂಡಿದೆ. ಈಗ ಲೋಕದಾದ್ಯಂತ ಲಭ್ಯವಿರುವ ಕುರ್‌ಆನ್ ಪ್ರತಿಗಳನ್ನು ಆ ಮೂಲ ಗ್ರಂಥದೊಂದಿಗಿಟ್ಟು ತಾಳೆ ನೋಡಿದರೆ ಯಾವುದೇ ವ್ಯತ್ಯಾಸ ಕಂಡು ಬರಲಾರದು. ಈ ರೀತಿ ಸಂಪೂರ್ಣ ಸುರಕ್ಷಿತವಾಗಿರುವ ಗ್ರಂಥ ಕುರ್‌ಆನಲ್ಲದೆ ಲೋಕದಲ್ಲಿ ಬೇರೊಂದಿಲ್ಲ. ಸಂಪೂರ್ಣ ಕುರ್‌ಆನನ್ನು ಯಥಾರೂಪದಲ್ಲಿ ಕಂಠಪಾಠ ಮಾಡಿದ ಲಕ್ಷಗಟ್ಟಲೆ ಜನರು ಲೋಕದಾದ್ಯಂತ ಲಭ್ಯವಿದ್ದಾರೆ. ಈ ಪ್ರಕ್ರಿಯೆ ಇನ್ನೂ ಜಾರಿಯಲ್ಲಿದೆ. ಪ್ರವಾದಿ(ಸ) ಕುರ್‌ಆನಿನ ಆದೇಶಗಳ ಪ್ರಕಾರ ಒಂದು ಸಮಾಜವನ್ನು ಕಟ್ಟಿ ಬೆಳೆಸಿದರು. ಅದರ ಮೂಲಕ ಇಸ್ಲಾಮ್ ಧರ್ಮವು ಲೋಕದಾದ್ಯಂತ ಹರಡಿತು ಮತ್ತು ಪ್ರಬಲವಾಯಿತು.

ಪವಿತ್ರ ಕುರ್‌ಆನ್ ಮನುಷ್ಯ ನಿರ್ಮಿತವಲ್ಲ, ದೇವನಿಂದಲೇ ಬಂದಿದೆ ಯೆಂಬುದಕ್ಕೆ ಹಲವು ಪುರಾವೆಗಳಿವೆ. ಫ್ರಾನ್ಸ್‌ನ ಮೊರಿಸ್‌ಬುಕೆ ಎಂಬ ಓರ್ವ ವಿಜ್ಞಾನಿ ಈ ಕುರಿತು ಪುರಾವೆಗಳನ್ನು ತನ್ನ 'ಬೈಬಲ್, ಕುರ್‌ಆನ್ ಎಂಡ್ ಸಯನ್ಸ್' ಎಂಬ ಗ್ರಂಥದಲ್ಲಿ ನೀಡಿದ್ದಾರೆ.

## ಪ್ರವಾದಿ ಮುಹಮ್ಮದ್‌ರನ್ನು(ಸ) ಸಂದೇಶವಾಹಕರನ್ನಾಗಿ ಮಾಡಲಾದ ನಂತರ ಅವರು ಮಾಡಿದ ಕಾರ್ಯಗಳು

ಮೊದಲನೆಯದಾಗಿ, ದೇವನ ಮೇಲಿನ ವಿಶ್ವಾಸವನ್ನು ಜನರಿಗೆ ನೆನಪಿಸಿ ಕೊಟ್ಟು ಅವರ ವಿಶ್ವಾಸವನ್ನು ವೃದ್ಧಿಸಿದರು. ದೇವನು ಒಬ್ಬನೇ. ಅವನೇ ಅಲ್ಲಾಹ್. ಅವನಿಗೆ ಸರಿ ಸಮಾನರು ಯಾರೂ ಇಲ್ಲ. ಅವನು ಸರ್ವಶಕ್ತನು. ಭೂಮ್ಯಾಕಾಶಗಳನ್ನೂ ಸೂರ್ಯ ಚಂದ್ರರನ್ನೂ ಸೃಷ್ಟಿಸಿದ ನಂತರ ಅವುಗಳನ್ನು

ನಿಯಂತ್ರಿಸುವವನು. ಇಂತಹ ಶಕ್ತಿವಂತ ದೇವನಿಗೆ ತಂದೆ ತಾಯಿಗಳೋ ಸಹಭಾಗಿಗಳೋ ಮಕ್ಕಳೋ ಅಗತ್ಯವಿಲ್ಲ. ಅವನಿಗೆ ಮಗನನ್ನೂ ಸಹಾಯಕರನ್ನೂ ಕಲ್ಪಿಸುವುದು ಅವನ ಘನತೆಗೆ ತಕ್ಕುದಲ್ಲ. ಅದು ಅವನನ್ನು ಅವಮಾನ ಮಾಡಿದಂತೆ. ಈ ರೀತಿ ಅವಮಾನಿಸಿದವರನ್ನು ಮತ್ತು ಪಶ್ಚಾತ್ತಾಪಪಟ್ಟು ಮರಳದವರನ್ನು ದೇವನು ಎಂದೆಂದಿಗೂ ಕ್ಷಮಿಸಲಾರನು. ಅದಕ್ಕಿಂತ ಸಣ್ಣ ತಪ್ಪು ಮಾಡಿದವರನ್ನು ತಾನು ಇಚ್ಛಿಸಿದರೆ ಕ್ಷಮಿಸುವನು. (ಕುರ್‌ಆನ್)

ದೇವನ ಗುಣವಿಶೇಷತೆಗಳನ್ನು ವಿವರಿಸುವ ಎಷ್ಟೋ ನಿದರ್ಶನಗಳನ್ನು ಪವಿತ್ರ ಕುರ್‌ಆನಿನಲ್ಲಿ ಕೊಡಲಾಗಿದೆ. ಉದಾಹರಣೆಗಾಗಿ ಒಂದನ್ನು ಈ ಕೆಳಗೆ ಕೊಡಲಾಗಿದೆ. ಮಕ್ಕಾದಲ್ಲಿ ಅವತೀರ್ಣವಾದ 'ಅನ್ನಬಅ್' ಎಂಬ 78ನೆಯ ಅಧ್ಯಾಯದ ಕೆಲವು ಸೂಕ್ತಗಳು ಹೀಗಿವೆ.

1) ನಾವು ಭೂಮಿಯನ್ನು ಹಾಸನ್ನಾಗಿ ಮಾಡಿಲ್ಲವೇ? (ಭೂಮಿಯು ಸೂರ್ಯನ ಸುತ್ತ ತೀವ್ರಗತಿಯಿಂದ ಸುತ್ತಾಡುತ್ತಿದೆ. ಅದರಿಂದಲೇ ರಾತ್ರಿ ಹಗಲು ಗಳುಂಟಾಗುತ್ತವೆ. ಆದರೆ ಅಷ್ಟು ವೇಗವಾಗಿ ಚಲಿಸುತ್ತಿದ್ದರೂ ನಮಗೆ ಅದು ಒಂದು ಹಾಸಿಗೆಯಂತಿರುವುದು ದೇವನ ಮಹಾ ಕರುಣೆಯಲ್ಲವೇ?)

2) ಪರ್ವತಗಳನ್ನು ಮೊಳೆಗಳಂತಾಗಿ ಮಾಡಿಲ್ಲವೇ? (ಭೂಮಿಯನ್ನು ಸಮುದ್ರಗಳು ಆವರಿಸಿಕೊಂಡಿವೆ. ಅದು ಅಲುಗಾಡದಂತೆ ಅದರ ಮೇಲೆ ಪರ್ವತ ಗಳನ್ನು ನಾಟಿರುವುದು ಒಂದು ದೊಡ್ಡ ಅನುಗ್ರಹವಲ್ಲವೇ?)

3) ನಿಮ್ಮನ್ನು (ಸ್ತ್ರೀ-ಪುರುಷ) ಜೋಡಿಗಳಾಗಿ ಸೃಷ್ಟಿಸಲಿಲ್ಲವೇ? (ಮನುಷ್ಯರ ಸೃಷ್ಟಿ, ಅವರನ್ನು ಜೋಡಿಗಳನ್ನಾಗಿ ಮಾಡಿರುವುದು ಆಲೋಚಿಸುವವರಿಗೆ ಒಂದು ದೊಡ್ಡ ದೃಷ್ಟಾಂತವಾಗಿದೆ. ದೇವನು ಎಲ್ಲ ವಸ್ತುಗಳನ್ನೂ ಜೋಡಿಗಳಾಗಿ ಸೃಷ್ಟಿಸಿದ್ದಾನೆ. ಆದರೆ ಅವನಿಗೆ ಮಾತ್ರ ಜೋಡಿಯಿಲ್ಲ.)

4) ನಿಮ್ಮ ನಿದ್ರೆಯನ್ನು ನಾವು ವಿಶ್ರಾಂತಿಯ ಸಾಧನವನ್ನಾಗಿ ಮಾಡಿಲ್ಲವೇ? (ನಿದ್ರೆಯು ಮನುಷ್ಯನಿಗೆ ಅತ್ಯಾವಶ್ಯಕವಾಗಿದೆ. ಆದರೆ ನಿದ್ರೆಯು ಏನು, ಅದು ಹೇಗೆ ಬರುತ್ತದೆಯೆಂಬುದು ವಿಜ್ಞಾನಿಗಳಿಗೂ ಅರ್ಥವಾಗದ ಸಂಗತಿಯಾಗಿ ಉಳಿದಿದೆ.)

5) ನಾವು ರಾತ್ರಿಯನ್ನು ಮರೆಮಾಚುವ ಸಾಧನವಾಗಿಯೂ ಹಗಲನ್ನು ಉಪ ಜೀವನ ಸಂಪಾದಿಸುವ ಸಮಯವನ್ನಾಗಿಯೂ ಮಾಡಿಲ್ಲವೇ? (ಯಾವಾಗಲೂ ಹಗಲು ಅಥವಾ ರಾತ್ರಿ ಇರುತ್ತಿದ್ದರೆ ಇಲ್ಲಿ ಜೀವಿಗಳ ಬದುಕು ದುಸ್ತರವಾಗುತ್ತಿತ್ತು. ಇದೂ ಒಂದು ದೊಡ್ಡ ಅನುಗ್ರಹವಲ್ಲವೇ?)

ಇನ್ನು ಸ್ವಲ್ಪ ನಿಮ್ಮ ಮೇಲ್ಭಾಗವನ್ನು ನೋಡಿರಿ.

6) ನಿಮ್ಮ ಮೇಲ್ಭಾಗದಲ್ಲಿ ಬಲವಾದ ಸಪ್ತಗಗನಗಳನ್ನು ನಿರ್ಮಿಸಲಿಲ್ಲವೇ? ಪ್ರಜ್ವಲಿಸುವ ಒಂದು ದೀಪವನ್ನು ಸೃಷ್ಟಿಸಲಿಲ್ಲವೇ? (ವಿಜ್ಞಾನಿಗಳ ಪ್ರಕಾರ ಸೂರ್ಯನ ಬಿಸಿಲು ಮತ್ತು ತಾಪದಿಂದಲೇ ಗಿಡ ಮರಗಳು ಚಿಗುರುತ್ತವೆ. ಫಲ-ಪುಷ್ಪಗಳಲ್ಲಿ ಬಣ್ಣಗಳುಂಟಾಗುತ್ತವೆ. ಅಲ್ಲದೆ ಇನ್ನೂ ಅನೇಕ ಪ್ರಯೋಜನಗಳಿವೆ. ಸೂರ್ಯ ಇಲ್ಲದಿರುತ್ತಿದ್ದರೆ, ಮಳೆಯ ಒಂದು ಹನಿಯೂ ಬೀಳುತ್ತಿರಲಿಲ್ಲ. ಸೂರ್ಯನು ಭೂಮಿಯಿಂದ ಎಷ್ಟೋ ಲಕ್ಷ ಕಿಲೋ ಮೀಟರ್‌ಗಳ ದೂರವಿದ್ದಾನೆ. ಅದು ಸ್ವಲ್ಪ ಹತ್ತಿರವಾಗಿರುತ್ತಿದ್ದರೆ ಎಲ್ಲ ವಸ್ತುಗಳೂ ಸುಟ್ಟು ಕರಕಲಾಗುತ್ತಿದ್ದವು. ಮನುಷ್ಯರಿಗೂ ಜೀವಿಸಲು ಸಾಧ್ಯವಿರುತ್ತಿರಲಿಲ್ಲ. ಕೆರೆ, ಬಾವಿಗಳು ಬತ್ತಿ ಹೋಗುತ್ತಿದ್ದುವು. ಸೂರ್ಯನು ಭೂಮಿಯಿಂದ ಸ್ವಲ್ಪ ದೂರದಲ್ಲಿದ್ದರೆ ತೀವ್ರ ಚಳಿಯಿಂದಾಗಿ ವಸ್ತುಗಳೆಲ್ಲ ಮುದುಡಿ ಹೋಗುತ್ತಿದ್ದುವು. ಮನುಷ್ಯನಿಗೆ ಜೀವಿಸುವುದು ಸಾಧ್ಯ ವಿರುತ್ತಿರಲಿಲ್ಲ. ಆದರೆ ಅಲ್ಲಾಹನ ಎಷ್ಟು ದೊಡ್ಡ ಅನುಗ್ರಹ! ದೇವನು ಸೂರ್ಯ ಮತ್ತು ಭೂಮಿಯ ಅಂತರವನ್ನು ಸಮತೋಲನದಲ್ಲಿ ಸರಿಯಾದ ಜಾಗದಲ್ಲಿ ಇರಿಸಿ ಮಾನವನಿಗೆ ಉಪಕಾರ ಮಾಡಿದ್ದಾನೆ. ಅವು ತಂತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಾ ಸರಾಗವಾಗಿ ಚಲಿಸುತ್ತಾ ಇವೆ. ಇದೊಂದು ದೊಡ್ಡ ವಿಸ್ಮಯವೇ ಸರಿ.)

7) ನಾವು ಮೋಡಗಳಿಂದ ಧಾರಾಕಾರ ನೀರು ಸುರಿಸಲಿಲ್ಲವೇ? (ಸೂರ್ಯನ ತಾಪದಿಂದಾಗಿ ಸಮುದ್ರದ ನೀರು ಆವಿಯಾಗಿ ಮೇಲೇರುತ್ತವೆ. ಅಲ್ಲಿ ಅದು ದೊಡ್ಡ ಪರ್ವತಗಳಂತಾಗುತ್ತವೆ. ಗಾಳಿಯು ಅದನ್ನು ತೇಲಿಸಿಕೊಂಡು ಚಲಾಯಿ ಸುತ್ತದೆ. ತರುವಾಯ ದೇವನ ಆಜ್ಞೆಯಂತೆ ನೀರು ಹನಿ ಹನಿಯಾಗಿ ನೆಲಕ್ಕೆ ಉದುರುತ್ತವೆ. ಈ ದೊಡ್ಡ ಕಾರ್ಖಾನೆಯನ್ನು ಸಜ್ಜುಗೊಳಿಸಿದವನು ಅದೆಷ್ಟು ಶಕ್ತಿಶಾಲಿ ಮತ್ತು ಕರುಣಾಮಯಿ!)

8) ತನ್ಮೂಲಕ ಧಾನ್ಯಗಳನ್ನೂ ತರಕಾರಿಗಳನ್ನೂ ದಟ್ಟವಾದ ತೋಟಗಳನ್ನೂ ಬೆಳೆಸಲಿಲ್ಲವೇ? (ಇದೆಲ್ಲ ಮನುಷ್ಯನ ಆಹಾರಕ್ಕಾಗಿ ಮಾಡಲಾದ ವ್ಯವಸ್ಥೆಯಾಗಿದೆ. ಸೂರ್ಯ, ಭೂಮಿ, ಗಾಳಿ, ಸಮುದ್ರ ಇವೆಲ್ಲ ಸೇರಿ ಕೆಲಸ ಮಾಡುತ್ತಿರುವುದು ಮನುಷ್ಯನಿಗಾಗಿ.)

ಪ್ರಸ್ತುತ ಎಲ್ಲ ದೃಷ್ಟಾಂತಗಳು ಪವಿತ್ರ ಕುರ್‌ಆನಿನ 78ನೇ ಅಧ್ಯಾಯ 'ಅನ್ನಬಅ್'ನಿಂದ ಪಡೆದುದಾಗಿದೆ. ಇಂತಹ ಇನ್ನೂ ಅನೇಕ ದೃಷ್ಟಾಂತಗಳು ಕುರ್‌ಆನಿನಲ್ಲಿವೆ. ಪವಿತ್ರ ಕುರ್‌ಆನ್ ಇಂದು ಲೋಕದ ಎಲ್ಲ ಭಾಷೆಗಳಲ್ಲೂ ಅರ್ಥ-ವ್ಯಾಖ್ಯಾನ ಸಹಿತ ಲಭ್ಯವಿದೆ. ಅದರ ಅಧ್ಯಯನ ನಡೆಸಿದರೆ ಸತ್ಯವು ಸ್ಪಷ್ಟವಾಗಿ ಗೋಚರಿಸುವುದು.

ಕುರ್‌ಆನ್‌ನಿಂದ ಹಾಗೂ ಪ್ರವಾದಿ ಮುಹಮ್ಮದ್(ಸ) ಅವರ ಮೂಲಕ ತಿಳಿದು ಬರುವ ವಿಚಾರವೇನೆಂದರೆ ದೇವನನ್ನು ನಮ್ಮ ಕಣ್ಣುಗಳಿಂದ ನೋಡಲು ಸಾಧ್ಯವಿಲ್ಲ. ಅವನು ನಿರಾಕಾರನು. ಆದರೆ ಅವನು ಇಡೀ ಜಗತ್ತಿನ ಜನರನ್ನು ನೋಡುತ್ತಾನೆ. ಅವನು ಎಲ್ಲರ ಜೊತೆಗಿದ್ದಾನೆ. ಅವನು ಸರ್ವವ್ಯಾಪಿ, ಪವಿತ್ರ ಕುರ್‌ಆನ್ ಹೇಳುತ್ತದೆ,

"ನೀವು ಎಲ್ಲಿದ್ದರೂ ಅವನು ನಿಮ್ಮ ಜತೆಗಿದ್ದಾನೆ. ಎಲ್ಲಿಂದ ಪ್ರಾರ್ಥಿಸಿದರೂ ಅವನು ಆಲಿಸಿ ಅದಕ್ಕೆ ಉತ್ತರಿಸುತ್ತಾನೆ."

ಇದರಿಂದ ತಿಳಿಯುವುದೇನೆಂದರೆ ಮನುಷ್ಯ ಕಷ್ಟದಲ್ಲಿರಲಿ ಸುಖದಲ್ಲಿರಲಿ ಅವನಲ್ಲೇ ಪ್ರಾರ್ಥಿಸಬೇಕು. ಅವನ ಮೇಲೆಯೇ ವಿಶ್ವಾಸವಿರಿಸಬೇಕು.

ಇನ್ನೊಂದು ಮೂಲಭೂತ ವಿಶ್ವಾಸವು ಪರಲೋಕ ಜೀವನದ ಬಗೆಗಿನ ವಿಶ್ವಾಸವಾಗಿದೆ. ಆದಿ ಮಾನವ ಆದಮ್‌ರ(ಅ) ಕಾಲದಿಂದಲೂ ಈ ವಿಶ್ವಾಸವು ಮನುಷ್ಯನಲ್ಲಿ ಬೇರೂರಿದೆ. ಈಗಲೂ ಆದಿ ಜನಾಂಗಗಳಲ್ಲಿ ಮರಣಾನಂತರ ಜೀವನದ ಕಲ್ಪನೆ, ಅಲ್ಲಿನ ಲೆಕ್ಕಾಚಾರ, ಸ್ವರ್ಗ-ನರಕಗಳ ವಿಶ್ವಾಸವು ಜೀವಂತ ವಾಗಿಯೇ ಇದೆ. ಆದರೆ ಕಾಲ ಕ್ರಮೇಣ ಈ ವಿಶ್ವಾಸವು ಕ್ಷೀಣಿಸತೊಡಗಿತು. ಅಂತ್ಯ ಪ್ರವಾದಿ(ಸ) ಅವರ ಮೂಲಕ ದೇವನು ಈ ವಿಶ್ವಾಸವನ್ನು ಪುನಃ ಪ್ರಬಲಗೊಳಿಸಿದನು.

## ಮನುಷ್ಯನ ಮಹತ್ವ

ಭೂಮ್ಯಾಕಾಶಗಳನ್ನೂ ಅದರಲ್ಲಿರುವ ಎಲ್ಲ ವಸ್ತುಗಳನ್ನೂ ಮನುಷ್ಯನಿಗಾಗಿ ಸೃಷ್ಟಿಸಲಾಗಿದೆ. ಆದರೆ ಮನುಷ್ಯನನ್ನು ಯಾಕಾಗಿ ಸೃಷ್ಟಿಸಲಾಗಿದೆ ಎಂಬ ಪ್ರಶ್ನೆ ಪ್ರಸ್ತುತವಾಗಿದೆ. ಇದಕ್ಕೆ ಉತ್ತರವನ್ನು ದೇವನು ನೀಡುತ್ತಾನೆ. ವಾಸ್ತವದಲ್ಲಿ ಮನುಷ್ಯನನ್ನು ಈ ಲೋಕದಲ್ಲಿ ಪರೀಕ್ಷೆಗಾಗಿ ಸೃಷ್ಟಿಸಲಾಗಿದೆ. ಎಲ್ಲ ವಸ್ತುಗಳನ್ನೂ ಪರೀಕ್ಷೆಗಾಗಿಯೇ ಆತನಿಗೆ ನೀಡಲಾಗಿದೆ. ಆದಕ್ಕಾಗಿ ಅವನಿಗೆ ಬುದ್ಧಿ-ವಿವೇಕವನ್ನು ನೀಡಲಾಗಿದೆ. ಅವನು ಅತ್ಯುತ್ತಮ ಕರ್ಮಗಳನ್ನು ಮಾಡುವಂತಾಗಲು ಪ್ರವಾದಿಗಳ ಮೂಲಕ ಅವನಿಗೆ ಮಾರ್ಗದರ್ಶನವನ್ನೂ ಮಾಡಲಾಗಿದೆ. ಜೊತೆಗೆ ಅಲ್ಲಾಹನು ಮನುಷ್ಯನನ್ನು ಪರೀಕ್ಷಿಸಲಿಕ್ಕಾಗಿ ಶೈತಾನನನ್ನೂ ಸೃಷ್ಟಿಸಿದ್ದಾನೆ. ಅವನನ್ನು ಲೋಕಾಂತ್ಯದವರೆಗೆ ಜೀವಂತವಾಗಿರಿಸಿ ಮನುಷ್ಯನನ್ನು ಕೆಡುಕಿನ ಮಾರ್ಗದತ್ತ ಪ್ರೇರೇಪಿಸುವಂತೆ ಮಾಡಿದ್ದಾನೆ. ಆದ್ದರಿಂದ ಶೈತಾನನ ಪ್ರೇರಣೆ ಮತ್ತು ಪ್ರಲೋಭನೆಗೊಳಗಾಗಿ ಸತ್ಯ ಮಾರ್ಗದಿಂದ ವ್ಯತಿಚಲಿಸಿದರೆ ಮನುಷ್ಯ ಭಾರೀ ನಷ್ಟಕ್ಕೊಳಗಾಗುವನು. ಆದರೆ ಶೈತಾನನಿಗೆ ಮನುಷ್ಯನನ್ನು ಬಲವಂತವಾಗಿ ಕೆಡುಕಿನ ಮಾರ್ಗದತ್ತ ಸೆಳೆಯಲು ಸಾಧ್ಯವಿಲ್ಲ. ಆ ಶಕ್ತಿಯನ್ನು ಶೈತಾನನಿಗೆ ನೀಡಲಾಗಿಲ್ಲ. ಮನುಷ್ಯನ ಪರೀಕ್ಷೆಯ ಅವಧಿ ಮುಗಿಯುವಾಗ ಅವನು ಮರಣ ಹೊಂದುತ್ತಾನೆ. ಅನಂತರ ಕರ್ಮಕ್ಕೆ ಅವಕಾಶವಿಲ್ಲ. ಈ ಲೋಕದಲ್ಲಿ ಮಾಡಿದ ಕರ್ಮಗಳ ಫಲಿತಾಂಶವನ್ನು ಪಡೆಯುವ ಪರಲೋಕಕ್ಕೆ ಅವನು ತೆರಳುವನು.

## ಮರಣವೆಂದರೇನು?

ಮನುಷ್ಯ ಕೇವಲ ಒಂದು ಭೌತಿಕ ವಸ್ತುವಲ್ಲ. ಅವನಲ್ಲಿ ಒಂದು ಆತ್ಮವೂ ಇದೆ. ಶರೀರ ಮತ್ತು ಆತ್ಮ ಸೇರಿ ಮನುಷ್ಯನಾಗುತ್ತಾನೆ. ಆತ್ಮವು ಶರೀರದಿಂದ ಬೇರ್ಪಡುವುದೇ ಮರಣವಾಗಿದೆ. ಮರಣವೆಂದರೆ ಸಂಪೂರ್ಣ ನಶಿಸಿ ಹೋಗುವುದಲ್ಲ. ಆತ್ಮವು ಶರೀರವನ್ನು ಬಿಟ್ಟಗಲುವುದೇ ಮರಣ. ಶರೀರ ಮಾತ್ರ ಮರಣ ಹೊಂದುತ್ತದೆ. ಆತ್ಮಕ್ಕೆ ಮರಣವಿಲ್ಲ. ಶರೀರದಿಂದ ಬೇರ್ಪಟ್ಟ ಆತ್ಮವು 'ಬರ್ಝಖ್' ಎಂಬ ಆತ್ಮ ಲೋಕಕ್ಕೆ ಹೋಗುತ್ತದೆ. ಮರಣ ಮತ್ತು ಪರಲೋಕ

ವರೆಗಿನ ಮಧ್ಯಾವಧಿಯನ್ನು 'ಬರ್ಝಖ್' ಎನ್ನಲಾಗುತ್ತದೆ. ಈ ಲೋಕದಲ್ಲಿ ಮಾಡಿದ ಕರ್ಮಗಳ ಅಂತಿಮ ವಿಚಾರಣೆಯು ಪರಲೋಕದಲ್ಲಿ ಆಗಲಿರುವುದು. ಆದರೆ ಬರ್ಝಖ್‌ನಲ್ಲಿ ಅದರ ಸ್ವಲ್ಪಾಂಶ ಅನುಭವವಾಗುವುದು. ಹೇಗೆಂದರೆ ಸತ್ಕರ್ಮಿ ಯಾದ ಮನುಷ್ಯನು ಆ ಲೋಕದಲ್ಲಿ ಶಾಂತಿ ಸಮಾಧಾನದಿಂದಿರುವನು. ಪರಲೋಕದ ವಿಚಾರಣೆಯ ಬಗ್ಗೆ ಅವನಿಗೆ ಹೆಚ್ಚು ಚಿಂತೆಯಿರಲಾರದು. ದುಷ್ಕರ್ಮ ಮಾಡಿದವನು ಆ ಲೋಕದಲ್ಲಿ ದುಃಖ-ನೋವನ್ನು ಅನುಭವಿಸುವನು. ಅಂತಿಮವಾಗಿ ಅವನಿಗೆ ಬಂದೊದಗುವ ದುರ್ಗತಿಯ ಬಗ್ಗೆ ಅವನು ಭಯಭೀತನಾಗಿರುವನು.

## ಪುನರುತ್ಥಾನ ದಿನ

ಎಲ್ಲ ವಸ್ತುಗಳಿಗೂ ಅಂತ್ಯ ಇರುವಂತೆ ಈ ಲೋಕಕ್ಕೂ ಒಂದು ಅಂತ್ಯವಿದೆ. ಆಗ ಎಲ್ಲಾ ಜೀವಿಗಳನ್ನೂ ಪರ್ವತಗಳನ್ನೂ ಆಕಾಶಗಳನ್ನೂ ಅಂತ್ಯಗೊಳಿಸಲಾಗುತ್ತದೆ. ಬೆಟ್ಟಗಳನ್ನೂ ಭೂಮುಖದಲ್ಲಿರುವ ಸಕಲ ವಸ್ತುಗಳನ್ನೂ ಸಂಪೂರ್ಣ ಪುಡಿಗೈದು ಒಂದು ವಿಶಾಲ ಮೈದಾನವನ್ನಾಗಿ ಮಾಡಲಾಗುತ್ತದೆ. ಅದಾದ ನಂತರ ಎಲ್ಲ ಆತ್ಮಗಳಿಗೂ ಅದರ ಶರೀರವನ್ನು ಕೊಟ್ಟು ಆ ಮೈದಾನದಲ್ಲಿ ಒಂದುಗೂಡಿಸ ಲಾಗುವುದು. ಅದುವೇ ಮಹ್‌ಶರಃ ಅಥವಾ ಪುನರುತ್ಥಾನ. ಜೀವನದ ಪರೀಕ್ಷೆಯ ಫಲಿತಾಂಶದ ದಿನವೂ ಅದೇ ಆಗಿರುತ್ತದೆ. ಈ ಲೋಕದಲ್ಲಿ ಪ್ರತಿಯೊಬ್ಬನ ಪ್ರತಿಯೊಂದು ಕರ್ಮವನ್ನು ದೇವಚರರು ದಾಖಲಿಸಿಡುತ್ತಾರೆ. ಅದನ್ನು ಪುನರುತ್ಥಾನ ದಿನದಂದು ಅವನ ಮುಂದಿಡಲಾಗುವುದು. ತನ್ನ ಕರ್ಮ ಪತ್ರವನ್ನು ತಾನೇ ಓದುವಂತೆ ಅವನಿಗೆ ಹೇಳಲಾಗುವುದು. ಅದರಿಂದ ಅವನಿಗೆ ತಾನು ಯಾವುದಕ್ಕೆ ಅರ್ಹನು- ಸ್ವರ್ಗಕ್ಕೋ ನರಕಕ್ಕೋ- ಎಂದು ತಿಳಿದು ಬರುವುದು. ಆದರೂ ಅಲ್ಲಾಹನು ಅವನ ಕರ್ಮ ಪತ್ರವನ್ನು ತೂಗಿ ನೋಡುವನು. ಸತ್ಕರ್ಮಗಳ ತಟ್ಟೆಯು ಭಾರವಾಗಿದ್ದರೆ ಅವನನ್ನು ಸ್ವರ್ಗಕ್ಕೂ ದುಷ್ಕರ್ಮಗಳ ತಟ್ಟೆಯು ಭಾರವಾಗಿದ್ದರೆ ಅವನನ್ನು ನರಕಕ್ಕೂ ಕಳುಹಿಸಲಾಗುವುದು. ಸ್ವರ್ಗ-ನರಕಗಳು ಮನಷ್ಯನ ಅಂತಿಮ ತಾಣವಾಗಿದ್ದು ಅಲ್ಲಿ ಅವನು ಸದಾಕಾಲ ಇರಬೇಕಾಗಿದೆ. ಅಪ್ರಾಪ್ತ ಮಕ್ಕಳು ತೀರಿಹೋದರೆ ಅವರಿಗೆ ಪರೀಕ್ಷೆ ಇರುವುದಿಲ್ಲ. ಅವರನ್ನು ವಿಚಾರಣೆಯಿಲ್ಲದೆಯೇ ಸ್ವರ್ಗಕ್ಕೆ ಕಳುಹಿಸಲಾಗುವುದು.

## ಸ್ವರ್ಗ-ನರಕ

ಸ್ವರ್ಗವೆಂದರೇನು, ಅದು ಹೇಗಿರುತ್ತದೆ ಎಂಬುದನ್ನೂ ನರಕವೆಂದರೇನು, ಅದರ ಸ್ವರೂಪವೇನು ಎಂಬುದನ್ನೂ ಪವಿತ್ರ ಕುರ್‌ಆನ್ ವಿವರವಾಗಿ ನಮ್ಮ ಮುಂದಿಡುತ್ತದೆ. ಸ್ವರ್ಗದ ಒಂದು ದೃಶ್ಯವನ್ನು ಕುರ್‌ಆನ್ ಈ ರೀತಿ ಚಿತ್ರಿಸುತ್ತದೆ.

"ದೇವಭಯದೊಂದಿಗೆ ಜೀವಿಸಿದವರು ನೆರಳಿನಲ್ಲೂ ಚಿಲುಮೆಗಳಲ್ಲೂ ಇರುವರು. ಅವರು ಇಷ್ಟಪಡುವ ಹಣ್ಣು ಹಂಪಲುಗಳು ಅವರಿಗೆ ಸಿಗುವುದು. ಅವರೊಂದಿಗೆ ಹೇಳಲಾಗುವುದು, ನೀವು ಮಾಡಿದ ಕರ್ಮಗಳ ಫಲವಾಗಿ ಇಂದು ನೀವು ತಿನ್ನಿರಿ, ಕುಡಿಯಿರಿ, ಸಜ್ಜನರಿಗೆ ನಾವು ಇಂತಹದೇ ಸತ್ಫಲವನ್ನು ನೀಡುತ್ತೇವೆ."

**(ಪವಿತ್ರ ಕುರ್‌ಆನ್, 77:41-44)**

ಇದೇ ರೀತಿಯಲ್ಲಿ ಸ್ವರ್ಗದ ವಿವರಣೆಯನ್ನು ಪವಿತ್ರ ಕುರ್‌ಆನಿನ ಅನೇಕ ಕಡೆಗಳಲ್ಲಿ ನೀಡಲಾಗಿದೆ.

ನರಕದ ಯಾತನೆಯ ಕುರಿತೂ ಕುರ್‌ಆನಿನಲ್ಲಿ ಅನೇಕ ಕಡೆಗಳಲ್ಲಿ ಪ್ರಸ್ತಾಪಿಸಿದೆ. ಒಂದು ಉದಾಹರಣೆ ಹೀಗಿದೆ-

"ನಿಶ್ಚಯವಾಗಿಯೂ ನರಕವು ಬಲೆ ಬೀಸಿ ಕಾಯುತ್ತಾ ಇದೆ. ಅದು ವಿದ್ರೋಹಿಗಳ ವಾಸಸ್ಥಳವಾಗಿದೆ. ಅದರಲ್ಲಿ ಅವರು ಸದಾ ಕಾಲ ಇರುವರು. ಅಲ್ಲಿ ಅವರಿಗೆ ನೆರಳೋ ತಂಪಾದ ಪಾನೀಯವೋ ಸಿಗಲಾರದು. ಕುದಿಯುವ ನೀರು ಮತ್ತು ಹುಣ್ಣುಗಳ ಕೀವು ಮಾತ್ರ ಸಿಗುವುದು." **(ಪವಿತ್ರ ಕುರ್‌ಆನ್, 78:21-25)**

ನರಕದ ಭಯಾನಕತೆಯ ಕುರಿತು ಇನ್ನೂ ಅನೇಕ ಕಡೆಗಳಲ್ಲಿ ಕುರ್‌ಆನ್ ವಿಸ್ತಾರವಾಗಿ ಪ್ರಸ್ತಾಪಿಸಿದೆ.

ಈ ಹಿಂದೆ ಪ್ರಸ್ತಾಪಿಸಿದಂತೆ ಮನುಷ್ಯನು ದೇವನ ಅತಿ ಶ್ರೇಷ್ಠ ಸೃಷ್ಟಿಯಾಗಿದ್ದಾನೆ. ಸೂರ್ಯ-ಚಂದ್ರರನ್ನೂ ಭೂಮಿಯಲ್ಲಿರುವ ಎಲ್ಲ ವಸ್ತುಗಳನ್ನೂ ಮನುಷ್ಯನಿಗಾಗಿ ಸೃಷ್ಟಿಸಲಾಗಿದೆ. ಅವನಿಗೆ ಜ್ಞಾನ ಮತ್ತು ಸ್ವಾತಂತ್ರ್ಯವನ್ನು ಕೊಟ್ಟು ಅವನನ್ನು ಪರೀಕ್ಷಿಸಲಿಕ್ಕಾಗಿ ಭೂಮಿಗೆ ಕಳಿಸಲಾಗಿದೆ. ಈ ಪರೀಕ್ಷೆ ಜೀವನದ ಅಂತ್ಯದವರೆಗೆ ನಡೆಯುತ್ತದೆ. ಅದು ಮುಗಿದ ಬಳಿಕ ಫಲಿತಾಂಶ ಸಿಗಬೇಕಾದುದು ಸಹಜ. ಫಲಿತಾಂಶ ಬಂದ ಬಳಿಕ ಉತ್ತೀರ್ಣರಾದವರು ಮತ್ತು

ಅನುತ್ತೀರ್ಣರಾದವರು ಸಮಾನರಾಗಿರುವುದಿಲ್ಲ. ಸತ್ಕರ್ಮ ಮಾಡಿದರೆ ಅವರ ಕರ್ಮಗಳ ಸತ್ಫಲ ಸಿಗಲೇಬೇಕು. ಅದೇ ರೀತಿ ದುಷ್ಕರ್ಮಿಗಳಾಗಿದ್ದವರಿಗೆ ಅವರ ದುಷ್ಕರ್ಮಗಳ ದುಷ್ಫಲಗಳೂ ಸಿಗಲೇಬೇಕು. ಅವರಿಗೆ ಶಿಕ್ಷೆಯಾಗ ಬೇಕಾದುದು ನ್ಯಾಯದ ಬೇಡಿಕೆಯಾಗಿದೆ. ದೇವನು ಇದನ್ನೇ ಮಾಡುತ್ತಾನೆ. ಹಾಗೆ ಮಾಡದೆ ಇದ್ದರೆ ಅದು ಅನ್ಯಾಯವಾದೀತು. ದೇವನು ಯಾರ ಮೇಲೂ ಅನ್ಯಾಯ ಮಾಡುವವನಲ್ಲ. ದೇವನು ಕೇಳುತ್ತಾನೆ- "ನಾವು ದುಷ್ಕರ್ಮಿಗಳನ್ನು ಸತ್ಕರ್ಮಿಗಳಂತೆ ಮಾಡಬೇಕೇ? ಇದೆಂತಹ ನ್ಯಾಯ?" (ಪವಿತ್ರ ಕುರ್‌ಆನ್)

ಆದ್ದರಿಂದಲೇ ಅವನು ಸ್ವರ್ಗವನ್ನೂ ನರಕವನ್ನೂ ತಯಾರಿಸಿಟ್ಟಿದ್ದಾನೆ. ಇದೆಲ್ಲಾ ಇಹಲೋಕದಲ್ಲಿ ಸಾಧ್ಯವಿಲ್ಲ. ಅದಕ್ಕೆ ಶಾಶ್ವತವಾದ ಪರಲೋಕದ ಜೀವನವನ್ನಿಟ್ಟಿದ್ದಾನೆ. ಮರಣದಿಂದ ಮನುಷ್ಯ ಸಂಪೂರ್ಣ ನಾಶವಾಗಿ ಬಿಡುತ್ತಾನೆ, ಅವನ ಶರೀರವೂ ಆತ್ಮವೂ ನಶಿಸಿ ಹೋಗುವುದೆಂದು ಕೆಲವರು ಭಾವಿಸುತ್ತಾರೆ. ಹಾಗಾದರೆ ಈ ವಿಚಾರಣೆ ಹೇಗೆ ಸಾಧ್ಯ? ದೇವನ ಕೆಲಸ ಅಪೂರ್ಣವೆಂದಲ್ಲವೇ ಇದರ ಅರ್ಥ? ವಾಸ್ತವದಲ್ಲಿ ಹಾಗಾಗಲು ಸಾಧ್ಯವಿಲ್ಲ. ಎಲ್ಲರಿಗೂ ತಂತಮ್ಮ ಕರ್ಮಗಳಿಗೆ ತಕ್ಕ ಸತ್ಫಲ ಅಥವಾ ಶಿಕ್ಷೆ ಸಿಕ್ಕಿದ ನಂತರವೇ ಮನುಷ್ಯನ ಸೃಷ್ಟಿಯ ಈ ಉದ್ದೇಶ ಪೂರ್ಣಗೊಳ್ಳುತ್ತದೆ.

## ದೇವನ ಕರುಣೆ

ದೇವನು ಮಹಾ ಕರುಣಾಳುವೂ ದಯಾಮಯನೂ ಆಗಿದ್ದಾನೆ. ಮನುಷ್ಯ ಎಷ್ಟೇ ದೊಡ್ಡ ಅಪರಾಧಗಳನ್ನು ಮಾಡಿರಲಿ, ಆತನೆಡೆಗೆ ಪಶ್ಚಾತ್ತಾಪಪಟ್ಟು ಮರಳಿ ಆತನೊಡನೆ ಕ್ಷಮೆ ಯಾಚಿಸಿದರೆ ಅವನು ಖಂಡಿತ ಕ್ಷಮಿಸಿ ಬಿಡುತ್ತಾನೆ ಎಂಬ ಶುಭವಾರ್ತೆ ಕೊಟ್ಟಿರುತ್ತಾನೆ. ಅವನು ಯಾರನ್ನೂ ನರಕಕ್ಕೆ ಕಳಿಸಲು ಬಯಸುವುದಿಲ್ಲ. ತನ್ನ ವಿಶ್ವಾಸ ಮತ್ತು ಕರ್ಮಗಳಿಂದಲೇ ಮನುಷ್ಯ ಸ್ವರ್ಗ ಅಥವಾ ನರಕಕ್ಕೆ ಅರ್ಹನಾಗುತ್ತಾನೆ. ಉತ್ತಮ ಕರ್ಮಗಳ ಮೂಲಕ ಸ್ವರ್ಗವನ್ನು ಗಳಿಸಿದರೆ ಕೆಟ್ಟ ಕರ್ಮಗಳ ಮೂಲಕ ಅವನು ತನ್ನನ್ನು ನರಕಕ್ಕೆ ಅರ್ಹನನ್ನಾಗಿ ಮಾಡುತ್ತಾನೆ. ದೇವನು ನಮ್ಮೆಲ್ಲರನ್ನೂ ನರಕ ಶಿಕ್ಷೆಯಿಂದ ರಕ್ಷಿಸಲಿ.

## ಇಸ್ಲಾಮ್

ಆದಿ ಮಾನವ ಆದಮ್‌ರಿಂದ(ಅ) ಹಿಡಿದು ಪ್ರವಾದಿ ಮುಹಮ್ಮದ್‌ರವರ(ಸ) ವರೆಗೆ ಬಂದ ಎಲ್ಲ ಪ್ರವಾದಿಗಳೂ ಒಂದೇ ಧರ್ಮವನ್ನು ಬೋಧಿಸಿದರು. ಅದುವೇ ಇಸ್ಲಾಮ್. ಇಸ್ಲಾಮ್ ಎಂಬುದು ಅರಬಿ ಪದ. ಅಂತ್ಯ ಪ್ರವಾದಿ ಮುಹಮ್ಮದ್‌ರ(ಸ) ಜನನವು ಅರೇಬಿಯಾದಲ್ಲಾಯಿತು. ಅವರ ಭಾಷೆಯೂ ಅರಬಿಯಾಗಿತ್ತು. ಇಸ್ಲಾಮ್ ಎಂಬ ಅರಬಿ ಪದದ ಅರ್ಥ 'ಶರಣಾಗತಿ' ಎಂದಾಗಿದೆ. ಅಂದರೆ ಮಾನವನು ತನ್ನ ಜೀವನವನ್ನು ದೇವನಿಗೆ ಸಮರ್ಪಿಸಿ ಅಥವಾ ಅವನಿಗೆ ಶರಣಾಗಿ ಬಾಳುವುದೇ 'ಇಸ್ಲಾಮ್' ಆಗಿದೆ. ಆ ಧರ್ಮವನ್ನು ಅನುಸರಿಸಿ ಬದುಕುವವರನ್ನು 'ಮುಸ್ಲಿಮ್' (ಆಜ್ಞಾನುಸಾರಿ) ಎಂದು ಹೇಳುತ್ತಾರೆ. ಅದು ಕೇವಲ ಮುಸ್ಲಿಮರ ಅಥವಾ ಒಂದು ಜನಾಂಗದ ಧರ್ಮವಲ್ಲ. ಏಕದೇವತ್ವ ಪ್ರವಾದಿತ್ವ ಮತ್ತು ಪರಲೋಕದ ಮೇಲೆ ದೃಢವಾದ ವಿಶ್ವಾಸವಿಟ್ಟು ದೇವನ ಆದೇಶಗಳಿಗೆ ಬದ್ಧವಾಗಿ ಜೀವಿಸುವವರೆಲ್ಲರೂ ಇಸ್ಲಾಮಿನ ವ್ಯಾಪ್ತಿಗೆ ಬರುತ್ತಾರೆ. ಅವರು ಯಾವುದೇ ಜನಾಂಗದವರಾಗಲಿ, ಯಾವ ಭೂಭಾಗದವರೇ ಆಗಲಿ- ಅವರೆಲ್ಲರೂ ಮುಸ್ಲಿಮರೇ. ಪ್ರವಾದಿಗಳು ತಂದಿದ್ದ ಜೀವನ ವಿಧಾನ(ಇಸ್ಲಾಮ್)ದಲ್ಲಿ ಜನರು ಮಾಡಿದ್ದ ತಿದ್ದುಪಡಿಗಳನ್ನು, ಹಸ್ತಕ್ಷೇಪಗಳನ್ನು ಅಂತ್ಯ ಪ್ರವಾದಿ ಮುಹಮ್ಮದ್(ಸ) ತಿದ್ದಿ, ಜನರ ವಿಶ್ವಾಸ-ಆಚಾರಗಳನ್ನು ಸರಿಪಡಿಸಿದ್ದರು.

## ಅಂತ್ಯ ಪ್ರವಾದಿ

ಮುಹಮ್ಮದ್(ಸ) ಅವರನ್ನು ಅಂತ್ಯ ಪ್ರವಾದಿಯಾಗಿ ಯಾಕೆ ಮಾಡ ಲಾಯಿತು? ಅವರ ನಂತರ ಪ್ರವಾದಿಗಳು ಏಕೆ ಬರುವುದಿಲ್ಲ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಉತ್ತರವೇನೆಂದರೆ ದೇವನು ಯಾವುದೇ ಕಾರ್ಯವನ್ನು ಆರಂಭಿಸಿದರೆ ಅದನ್ನು ಅಂತ್ಯಗೊಳಿಸುತ್ತಾನೆ. ಉದಾ: ನೆಲದಲ್ಲಿ ಒಂದು ಬೀಜ ಬಿತ್ತಿದರೆ ಅದು ಮೊಳಕೆಯೊಡೆದು ಗಿಡವಾಗುತ್ತದೆ. ತರುವಾಯ ಬೆಳೆದು ದೊಡ್ಡ ಮರವಾಗುತ್ತದೆ. ಗೆಲ್ಲುಗಳೂ ಫಲ-ಪುಷ್ಪಗಳೂ ಉಂಟಾಗುತ್ತವೆ. ಮರ ತುಂಬಾ ಫಲಗಳುಂಟಾದ ನಂತರ ಅವು ಬಾಡ ತೊಡಗುತ್ತದೆ. ಕ್ರಮೇಣ ಮರವು

ನಿಷ್ಪ್ರಯೋಜಕವಾಗುತ್ತದೆ. ಎಲ್ಲ ವಸ್ತುಗಳ ಅವಸ್ಥೆಯೂ ಹೀಗೆಯೇ. ಪ್ರತಿಯೊಂದಕ್ಕೂ ಆದಿ ಮತ್ತು ಅಂತ್ಯವೆಂಬುದಿದೆ. ಹಾಗೆಯೇ ಪ್ರವಾದಿತ್ವವೂ ಅಂತ್ಯವಾಗಬೇಕಿತ್ತು, ಆದರೆ ದೇವನಿಗೆ ಮಾತ್ರ ಆದಿಯೂ ಇಲ್ಲ, ಅಂತ್ಯವೂ ಇಲ್ಲ.

## ಜೀವನ ಕ್ರಮ:

ಅಂತ್ಯ ಪ್ರವಾದಿಯ ಆಗಮನಕ್ಕೆ ಮುಂಚೆ ಬಂದಿದ್ದ ಪ್ರವಾದಿಗಳೆಲ್ಲರೂ ಒಂದು ನಿರ್ದಿಷ್ಟ ಕಾಲಕ್ಕೆ, ಜನಾಂಗಕ್ಕೆ ಮತ್ತು ನಿರ್ದಿಷ್ಟ ಪ್ರದೇಶಕ್ಕೆ ಬಂದಿದ್ದರು. ಆದರೆ ಪ್ರವಾದಿ ಮುಹಮ್ಮದ್(ಸ) ಅವರನ್ನು ಸಕಲ ಮಾನವರಿಗಾಗಿ, ಲೋಕಾಂತ್ಯದ ವರೆಗೂ ಪ್ರವಾದಿಯಾಗಿ ನೇಮಿಸಲಾಗಿದೆ. ಅವರು ತಂದ ಜೀವನ ಕ್ರಮವು ಸಂಪೂರ್ಣ ಜೀವನಕ್ಕಾಗಿರುವುದು. ಆದ್ದರಿಂದ ಅವರ ನಂತರ ಯಾವುದೇ ಪ್ರವಾದಿಯ ಅಗತ್ಯವಿರುವುದಿಲ್ಲ. ಈ ಜೀವನ ಕ್ರಮಕ್ಕೆ ಸಂಬಂಧಿಸಿದಂತೆ ಕೆಲವು ವಿಷಯಗಳನ್ನು ಇಲ್ಲಿ ಕೊಡಲಾಗುತ್ತದೆ.

ದೇವನ ಮೇಲೆ, ಪ್ರವಾದಿಗಳ ಮೇಲೆ, ಮರಣಾನಂತರ ಜೀವನದ ಮೇಲೆ ಹೇಗೆ ವಿಶ್ವಾಸವಿರಿಸಬೇಕು. ದೇವನ ಮತ್ತು ಪ್ರವಾದಿಗಳ ಹಕ್ಕು ನಮ್ಮ ಮೇಲೆ ಏನಿದೆ? ತಂದೆ-ತಾಯಿಯ, ಕುಟುಂಬಿಕರ, ನೆರೆಹೊರೆಯವರ ಮತ್ತಿತರ ಹಕ್ಕುಗಳು ಏನು? ಬಡವರ, ದೀನದಲಿತರ ಹಕ್ಕುಗಳು ಯಾವುವು? ಎಂದೆಲ್ಲ ವಿವರಿಸಲಾಗಿದೆ.

ಸತ್ಕರ್ಮಗಳು ಯಾವುವು ಎಂದು ತಿಳಿಸಲಾಯಿತು. ಪ್ರತಿಯೊಂದು ಒಳ್ಳೆಯ ಕಾರ್ಯಕ್ಕೂ ಅದು ಎಷ್ಟೇ ಸಣ್ಣದಾಗಿರಲಿ, ದೊಡ್ಡದಾಗಿರಲಿ ನ್ಯಾಯ ತೀರ್ಮಾನದ ದಿನದಂದು ಅದಕ್ಕೆ ಪ್ರತಿಫಲವನ್ನು ಖಂಡಿತ ನೀಡಲಾಗುವುದು. ನಮಾಝ್, ಝಕಾತ್, ಉಪವಾಸ, ಹಜ್ಜ್‌ಗಳಂತಹ ಎಲ್ಲ ಕಡ್ಡಾಯ ಆರಾಧನೆಗಳಿಗೂ ಕಡ್ಡಾಯ ವಲ್ಲದ ಐಚ್ಛಿಕವಾಗಿ ನಿರ್ವಹಿಸುವ ಕಾರ್ಯಗಳಿಗೂ ಪುಣ್ಯ ಸಿಗುವುದು. ಉದಾ: ದಾನ-ಧರ್ಮ, ರೋಗಿಗಳ ಶೂಶ್ರೂಷೆ, ಹೆಣ್ಮಕ್ಕಳ ವಿವಾಹ, ವಿದ್ಯಾಭ್ಯಾಸ ವ್ಯವಸ್ಥೆ ಇತ್ಯಾದಿ ಕಾರ್ಯಗಳು. ಯಾವ ಕಾರ್ಯವನ್ನು ಮಾಡಿದರೂ ಸ್ವರ್ಗದ ರೂಪದಲ್ಲಿ ಪ್ರತಿಫಲ ಸಿಗುವುದು. ಸತ್ಕರ್ಮದಲ್ಲಿ ಯಾವುದೇ ಕಡಿತ ಮಾಡಲಾಗದು. ಸತ್ಕರ್ಮಿಗಳಿಗೆ ಇದೊಂದು ಸುವಾರ್ತೆಯಲ್ಲವೇ? ಅದೇ ರೀತಿಯಲ್ಲಿ

ದುಷ್ಕರ್ಮಿಗಳಿಗೂ ಅವರ ಕರ್ಮಫಲ ಭಯಾನಕ ನರಕ ಶಿಕ್ಷೆಯ ರೂಪದಲ್ಲಿ ಸಿಗದೆ ಇರಲಾರದು.

ಕಡ್ಡಾಯ ಆರಾಧನೆಗಳಿಗಿರುವಷ್ಟೇ ಮಹತ್ವವನ್ನು ಮಾನವ ಹಕ್ಕುಗಳಿಗೂ ಕೊಡಲಾಗಿದೆ. ಮಾನವ ಹಕ್ಕುಗಳ ಹರಣವು ಮಹಾಪಾಪವಾಗಿದೆ. ಉದಾ: ಯಾರನ್ನಾದರೂ ಕೊಲ್ಲುವುದು. ಹಾಗೆ ಮಾಡಿದವನಿಗೆ ಪರಲೋಕದಲ್ಲಿ ಕಠಿಣ ಶಿಕ್ಷೆಯ ಎಚ್ಚರಿಕೆ ನೀಡಲಾಗಿದೆ. ಅಂತಹವನು ಶಾಶ್ವತ ನರಕ ಶಿಕ್ಷೆಯಲ್ಲಿ ಬಿದ್ದು ನರಳಬೇಕಾಗುವುದು. 'ಅವನ ಮೇಲೆ ದೇವನ- ಶಾಪ-ಕೋಪಗಳಿರುವುದು.' **(ಪವಿತ್ರ ಕುರ್‌ಆನ್)** ಅದೇ ರೀತಿಯಲ್ಲಿ ಕಳ್ಳತನ, ದರೋಡೆ, ಲೂಟಿ, ಮೋಸ, ವಂಚನೆ, ಲಂಚ ಪಡೆಯುವುದು, ಸಾಲ ಪಡೆದು ಮರು ಪಾವತಿಸದೆ ಇರುವುದು, ಸುಳ್ಳು ಹೇಳುವುದು, ವಾಗ್ದಾನ ಮುರಿಯುವುದು ಇತ್ಯಾದಿ ಎಲ್ಲವೂ ಪಾಪವಾಗಿದೆ. ಅವೆಲ್ಲದರ ನಷ್ಟವನ್ನು ಅಪರಾಧಿಯಿಂದ ವಸೂಲು ಮಾಡಲಾಗುವುದು. ವಿಚಾರಣೆಯ ದಿನದಂದು ಅವನ ಮೇಲೆ ಮೊಕದ್ದಮೆ ಹೂಡಲಾಗುವುದು. ಅಲ್ಲಿ ಯಾವ ಶಿಫಾರಸುದಾರನಾಗಲೀ ವಕೀಲನಾಗಲೀ ಇರಲಾರರು. ನ್ಯಾಯಾಧೀಶರ ನ್ಯಾಯಾಧೀಶನಾದ ದೇವನು ಎಲ್ಲರ ಹಕ್ಕುಗಳನ್ನು ಅಪರಾಧಿಯು ಮಾಡಿದ ಪುಣ್ಯಗಳಿಂದ ನೀಡುವನು. ಅವನ ಪುಣ್ಯಗಳೆಲ್ಲ ಮುಗಿದು ಅವರ ಹಕ್ಕು ಪೂರ್ತಿ ಸಂದಾಯವಾಗದೆ ಇನ್ನೂ ಉಳಿದಿದ್ದರೆ ಅವರ ಪಾಪಗಳನ್ನು ಇವನ ಖಾತೆಗೆ ಹಾಕಿ ಇವನನ್ನು ನರಕಕ್ಕೆಸೆಯಲಾಗುವುದು. ಅದರಿಂದ ಬಿಡುಗಡೆ ಹೊಂದುವ ಯಾವ ಮಾರ್ಗವೂ ಇರಲಾರದು. ಇಂತಹ ವ್ಯಕ್ತಿಯನ್ನು ಪ್ರವಾದಿ(ಸ) ದಿವಾಳಿಕೋರ ಎಂದಿದ್ದಾರೆ.

ಮರಣ ಹೊಂದಿದವನ ಸೊತ್ತಿನ ವಿತರಣೆಯ ನಿಯಮವನ್ನು ಪವಿತ್ರ ಕುರ್‌ಆನಿನಲ್ಲಿ ವಿವರಿಸಲಾಗಿದೆ. ಅದನ್ನು ದೇವನೇ ನಿಶ್ಚಯಿಸಿದ್ದಾನೆ. ಮೃತನ ವಾರೀಸು ಹಕ್ಕು ಪಡೆಯಲು ಅರ್ಹರು ಯಾರೆಲ್ಲ ಎಂದು ವಿವರಿಸಲಾಗಿದೆ. ಅದರಲ್ಲಿ ತಂದೆ, ತಾಯಿಗಳು, ಮಕ್ಕಳು, ಪತಿ-ಪತ್ನಿಯರು ಸೇರಿದ್ದಾರೆ. ಈ ನಿಯಮವನ್ನು ಉಲ್ಲಂಘಿಸುವುದನ್ನು ಅಥವಾ ಅವರಿಗಾಗಿ ಉಯಿಲು ಮಾಡುವುದನ್ನು ನಿಷೇಧಿಸಲಾಗಿದೆ. ಅದನ್ನು ಉಲ್ಲಂಘಿಸುವವರಿಗೆ ಕಠಿಣ ಶಿಕ್ಷೆಯ

ಎಚ್ಚರಿಕೆ ನೀಡಲಾಗಿದೆ.

ನಿಷಿದ್ಧ ವಸ್ತುಗಳು ಯಾವುವು ಎಂಬುದನ್ನು ವಿವರವಾಗಿ ತಿಳಿಸಲಾಗಿದೆ. ಒಟ್ಟಿನಲ್ಲಿ ಪವಿತ್ರ ಕುರ್‌ಆನ್ ಮನುಷ್ಯ ಜೀವನದ ಎಲ್ಲ ರಂಗಗಳಿಗೂ ಬೇಕಾದ ರೀತಿ-ನೀತಿ, ವಿಧಾನವನ್ನು ತೋರಿಸಿಕೊಟ್ಟಿದೆ. ದೇವಭಯವುಳ್ಳ ಹಾಗೂ ಪರಲೋಕದ ಮೇಲೆ ದೃಢ ವಿಶ್ವಾಸವುಳ್ಳವರು ಈ ಜೀವನ ಕ್ರಮವನ್ನು ಪಾಲಿಸುತ್ತಾರೆ. ಆಗ ಈ ಲೋಕದಲ್ಲೂ ಮಾನವನಿಗೆ ಶಾಂತಿ-ನೆಮ್ಮದಿ ದೊರೆಯುತ್ತದೆ. ಪರಲೋಕ ಜೀವನದಲ್ಲಂತೂ ಶಾಶ್ವತವಾದ ಸುಖ-ಸಂತೋಷಗಳಿರುವುವು. ದೇವನು ಎಲ್ಲರಿಗೂ ಅದರ ಸೌಭಾಗ್ಯವನ್ನು ಕರುಣಿಸಲಿ.

ದೇವನು ಈ ಲೋಕದಲ್ಲಿ ಒಂದು ಶಾಂತಿಯುತ ರಾಷ್ಟ್ರ ನಿರ್ಮಾಣದ ವಿಧಾನವನ್ನು ತನ್ನ ಪ್ರವಾದಿಯ(ಸ) ಮೂಲಕ ತೋರಿಸಿಕೊಟ್ಟನು. ಅವರು ಅರೇಬಿಯಾ ದೇಶದಲ್ಲಿ ಅಂತಹ ಒಂದು ಸಾಮ್ರಾಜ್ಯವನ್ನು ಕಟ್ಟಿ ತೋರಿಸಿದರು. ಈ ಎಲ್ಲಾ ಕಾರ್ಯಗಳು ಮುಗಿದ ನಂತರ ದೇವನು (ಅಲ್ಲಾಹನು) ಪವಿತ್ರ ಕುರ್‌ಆನಿನಲ್ಲಿ ಈ ರೀತಿ ಘೋಷಿಸಿದನು.

"ಇಂದು ನಾನು ನಿಮಗಾಗಿ ನಿಮ್ಮ ಧರ್ಮವನ್ನು ಪೂರ್ತಿಗೊಳಿಸಿದ್ದೇನೆ."

(ಪವಿತ್ರ ಕುರ್‌ಆನ್, 5:3)

"ಅಲ್ಲಾಹನ ಬಳಿ ಧರ್ಮವು ಇಸ್ಲಾಮ್ ಮಾತ್ರ." (ಪವಿತ್ರ ಕುರ್‌ಆನ್, 3:19)

"ಯಾರಾದರೂ ಈ ವಿಧೇಯತೆಯ(ಇಸ್ಲಾಮ್) ಹೊರತು ಯಾವುದಾದರೂ ಇತರ ಪದ್ಧತಿಯನ್ನು ಸ್ವೀಕರಿಸಲಿಚ್ಛಿಸಿದರೆ, ಅವನ ಆ ಪದ್ಧತಿಯನ್ನು ಎಷ್ಟು ಮಾತ್ರಕ್ಕೂ ಮಾನ್ಯ ಮಾಡಲಾಗದು ಮತ್ತು ಪರಲೋಕದಲ್ಲಿ ಅವನು ವಿಫಲನೂ ಹತಾಶನೂ ಆಗಿ ತೀರುವನು." (ಪವಿತ್ರ ಕುರ್‌ಆನ್, 3:85)

ವಸ್ತು ಸ್ಥಿತಿಯು ಹೀಗಿರುವಾಗ ಈ ವಿಷಯದಲ್ಲಿ ಗಂಭೀರವಾಗಿ ಆಲೋಚಿಸಿ ತೀರ್ಮಾನ ಕೈಗೊಳ್ಳುವುದು ಹಿತಕರವಲ್ಲವೇ?

❋ ❋ ❋